ಖಾಸಗಿ ಪ್ರಸಾರ



# ಶ್ರೀದೇವಿ ಅಂತರಂಗ

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ



ಮಾಸಪತ್ರಿಕೆ
ಸಂಪುಟ 4, ಸಂಚಿಕೆ 4, ಫೆಬ್ರವರಿ 2026

SHRIDEVI ANTARANGA
Monthly Magazine

SHRIDEVI EDUCATION

ಸಂಪಾದಕರು: ಡಾ. ಎಂ.ಆರ್. ಹುಲಿನಾಯ್ಕರ್ ಗೌರವ ಸಂಪಾದಕರು: ಡಾ. ಕೆ.ಆರ್.ಕಮಲೇಶ್ ಕಾರ್ಯನಿರ್ವಾಹಕ ಸಂಪಾದಕರು: ಡಾ. ರಮಣ ಎಂ. ಹುಲಿನಾಯ್ಕರ್ ಇಂಗ್ಲಿಷ್ ಆವೃತ್ತಿ ಸಂಪಾದಕರು: ಕೃಷ್ಣ ವಿ.




ಸಂಪಾದಕರ ಅಂತರಂಗ

ಡಾ. ಎಂ.ಆರ್. ಹುಲಿನಾಯ್ಕರ್
ಸಂಸ್ಥಾಪಕ ಅಧ್ಯಕ್ಷರು
ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ

ನಾನು ಯಾವಾಗಲೂ ನನ್ನ ಸಹೋದ್ಯೋಗಿಗಳಿಗೆ ಹೇಳುವುದೇನೆಂದರೆ ಪೇಶಂಟ್‌ನ ಆರ್ಥಿಕಸ್ಥಿತಿಯನ್ನು ನೋಡಬೇಡಿ. ವೈದ್ಯಕೀಯ ಕ್ಷೇತ್ರದಲ್ಲಿ ಆಗಿರುವ ಎಲ್ಲಾ ಆವಿಷ್ಕಾರಗಳನ್ನು ಪೇಶೆಂಟ್‌ಗೆ ಅಗತ್ಯವಿದ್ದಾಗ ಯಾವುದೇ ತಾರತಮ್ಯವಿಲ್ಲದೆ ನೀಡಿ.

## ದೇಶದ 140 ಕೋಟಿ ಜನರ ಆರೋಗ್ಯಕ್ಕೆ ಭದ್ರತೆ ನೀಡುವವರು ಯಾರು?




### ಆರೋಗ್ಯವಲಯದ ಸೌಲಭ್ಯವನ್ನು ಎಲ್ಲರಿಗೂ ಕೊಡಿ

ಈಗ ನಾನು ಪ್ರಾಕ್ಟಿಸ್ ಬಿಟ್ಟು 18 ವರ್ಷಗಳ ಮೇಲಾಗುತ್ತಿದೆ. ಆದರೂ ಆಗಿನ ನನ್ನ ಅನುಭವಗಳು ನೆನಪಿಗೆ ಯೋಗ್ಯವೆನಿಸುತ್ತದೆ. ಆ ನೆನಪುಗಳು ಒಂದು ಮಹತ್ತರ ಸಂದೇಶವನ್ನು ಕೂಡ ನೀಡುತ್ತದೆ ಎಂದು ನಾನು ಭಾವಿಸುತ್ತೇನೆ. ಆಗ ನಾವು ತೆಗೆದುಕೊಂಡ ನಿರ್ಧಾರ, ನಮ್ಮ ಆಲೋಚನಾ ಸರಣಿ ಮತ್ತು ಪೇಶೆಂಟ್ ಕುರಿತಾದ ವೈದ್ಯಕೀಯ ಕ್ರಮಗಳು ಕೆಲವರಿಗಾದರೂ ಚಿಂತನೆಗೆ ಅವಕಾಶ ಮಾಡಿಕೊಡಬಹುದು. ಅಂತಹ ಅನುಭವವನ್ನು ತಮ್ಮೊಡನೆ ಹಂಚಿಕೊಳ್ಳಲು ಬಯಸುತ್ತೇನೆ.

2001 ಸೆಪ್ಟೆಂಬರ್ ಎರಡನೇ ವಾರದಲ್ಲಿ ನಡೆದ ಘಟನೆಯಿದು. ತುಮಕೂರಿನ ಎಂ.ಜಿ. ರಸ್ತೆಯಲ್ಲಿರುವ ಶ್ರೀದೇವಿ ಆಸ್ಪತ್ರೆಯಲ್ಲಿ ಜರುಗಿದ ಘಟನೆ. ಕುಣಿಗಲ್ ತಾಲೂಕು ಹುಲಿಯೂರುದುರ್ಗ ಹೋಬಳಿ ಸಣ್ಣ ಹಳ್ಳಿಯಿಂದ ಸುಮಾರು 45 ವರ್ಷದ ಪೇಶೆಂಟ್ ನಮ್ಮ ಆಸ್ಪತ್ರೆಗೆ ಬರುತ್ತಾರೆ. ಆಗ ನಮ್ಮ ಆಸ್ಪತ್ರೆಯಲ್ಲಿ ನನ್ನ ಜೊತೆಗೆ ಐದಾರು ಜೂನಿಯರ್ ಡಾಕ್ಟರ್‌ಗಳಿದ್ದರು. ಯಾವುದೇ ಪೇಶೆಂಟ್ ಬಂದರೂ ತಕ್ಷಣ ಅವರುಗಳೇ ಅದನ್ನು ನೋಡಿ ಅಗತ್ಯ ಚಿಕಿತ್ಸೆ ಮಾಡಿ, ನನ್ನ ಗಮನಕ್ಕೆ ತರುತ್ತಿದ್ದರು. ಆಯಾಯ ದಿನದ ಸಂಜೆ ನಾನು ಸ್ವತಃ ಪೇಶೆಂಟ್‌ಗಳ ವಿವರಗಳನ್ನು ನೋಡುತ್ತಿದ್ದೆ.


ಹಾಗೆ ಬಂದ ಈ ಪೇಶೆಂಟ್‌ಗೆ ಪ್ರಾರಂಭದಲ್ಲಿ ಹೊಟ್ಟೆನೋವು ಕಾಣಿಸಿಕೊಂಡಿದೆ. ಅದಕ್ಕೆ ಆಸ್ಪತ್ರೆಯ ವೈದ್ಯರು ಚಿಕಿತ್ಸೆ ನೀಡಿದ್ದಾರೆ. ಆದರೆ ನೋವು ಕಡಿಮೆಯಾಗಲಿಲ್ಲ. ಆತ ಮತ್ತೆ ಬಂದ. ಈಗ ಆತನಿಗೆ ಜ್ವರ ಮತ್ತು ವಾಂತಿಯಾಗಿತ್ತು. ಸುಮಾರು ಹತ್ತು ಹನ್ನೆರಡು ದಿನ ಆತ ಆಸ್ಪತ್ರೆ ಮತ್ತು ತನ್ನ ಊರಿಗೆ ಓಡಾಡಿದ್ದಾನೆ.

ಈ ಸಲ ಆ ರೋಗಿ ನನ್ನ ಬಳಿ ಬಂದ. ಅವನನ್ನು ನೋಡುತ್ತಲೇ ನನಗೆ ಅನುಮಾನ ಬಂದಿತು. ನನ್ನ ಕಿರಿಯ ಸಹೋದ್ಯೋಗಿಯನ್ನು ಕರೆದು 'ಈತನಿಗೆ ಏನೇನು ಪರೀಕ್ಷೆಗೆ ಹೇಳಿದ್ದೆ' ಎಂದು ಕೇಳಿದೆ. ನನ್ನ ಪ್ರಕಾರ ಆತ ಈ ಪೇಶೆಂಟ್‌ಗೆ ಅಲ್ಟ್ರಾಸೌಂಡ್ ಪರೀಕ್ಷೆ ಮಾಡಿಸಲು ಸೂಚಿಸಿರಬೇಕೆಂದು ಭಾವಿಸಿದ್ದೆ. ಆದರೆ ಕಿರಿಯ ವೈದ್ಯ ಆ ರೋಗಿಯನ್ನು ಯಾವುದೇ ಪರೀಕ್ಷೆಗೆ ಒಳಪಡಿಸಿರಲಿಲ್ಲ. ಸಹಜವಾಗಿ ಹೊಟ್ಟೆನೋವು ಮತ್ತು ಜ್ವರಕ್ಕೆ ಅವರು ಚಿಕಿತ್ಸೆ ನೀಡಿದ್ದರು. ನಾನು ಆಶ್ಚರ್ಯದಿಂದ ನನ್ನ ಸಹೋದ್ಯೋಗಿಯನ್ನು 'ಏಕೆ ಅವರಿಗೆ ಅಗತ್ಯ ಪರೀಕ್ಷೆಗೆ ಸೂಚಿಸಲಿಲ್ಲ' ಎಂದು ಪ್ರಶ್ನಿಸಿದೆ. ಅದಕ್ಕೆ ಕಿರಿಯ ವೈದ್ಯ "ಸರ್, ಅವರ ಸ್ಥಿತಿ ನೋಡಿದರೆ ಅವರಿಗೆ ಏನೂ ಪರೀಕ್ಷೆ ಮಾಡಿಸಿಕೊಳ್ಳಲು ಆರ್ಥಿಕ ಚೈತನ್ಯವಿಲ್ಲವೆಂದು ಭಾವಿಸಿದೆ. ಅದಕ್ಕಾಗಿ ನಾನು ಯಾವುದನ್ನು ಸೂಚಿಸಲಿಲ್ಲ" ಎಂದರು.

ಆಗ ನಾನು "ಅಲ್ಲಪ್ಪ, ಅವರಿಗೆ ಆರ್ಥಿಕ ಶಕ್ತಿ ಇದೆಯೋ ಇಲ್ಲವೋ ಎನ್ನುವುದು ಮುಖ್ಯವಲ್ಲ. ನಮಗೆ ವೈದ್ಯಕೀಯ ವಿಜ್ಞಾನ ಏನು ಕಲಿಸಿದೆ. ನೀನು ಎಂ.ಬಿ.ಬಿ.ಎಸ್. ಓದುತ್ತಿರುವಾಗ ನಿಮ್ಮ ಪ್ರಾಧ್ಯಾಪಕರು ಇಂತಹ ರೋಗಿಗಳು ಬಂದಾಗ ಏನು ಮಾಡಬೇಕೆಂದು ಹೇಳಿದ್ದಾರೆ. ನಿಮ್ಮ ಪ್ರಾಧ್ಯಾಪಕರೇ ತಮ್ಮ ಬಂಧುಗಳೊಬ್ಬರನ್ನು ನಿನ್ನ ಬಳಿ ಈಗ ಕಳುಹಿಸಿದರು ಎಂದು ಭಾವಿಸಿಕೋ, ಆತ ಆರ್ಥಿಕವಾಗಿ ದುರ್ಬಲನಾಗಿರಬಹುದು, ನೀನು ಅವನಿಗೆ ವೈದ್ಯಶಾಸ್ತ್ರದ ಪ್ರಕಾರ ಅಗತ್ಯ ಪರೀಕ್ಷೆಗಳನ್ನು ಮಾಡಿಸದಿದ್ದರೆ ನಿಮ್ಮ ಪ್ರಾಧ್ಯಾಪಕರಿಗೆ ಏನು ಉತ್ತರ ಕೊಡುತ್ತೀಯಾ" ಎಂದು ನನ್ನ ಸಹೋದ್ಯೋಗಿಯನ್ನು ಕೇಳಿದೆ. ಆಗ ಆತ ಆತ್ಮವಿಮರ್ಶೆಮಾಡಿಕೊಳ್ಳಲಾರಂಭಿಸಿದ.

▶▶ 2ನೇ ಪುಟಕ್ಕೆ...

## ಬೆಂಗಳೂರಿನ ಹೊರಗೆ ಐಟಿ ಉದ್ಯಮದ ಭವಿಷ್ಯ






■ ಡಾ. ಗಿರೀಶ್ ಎಲ್
ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಕೃತಕ ಬುದ್ಧಿಮತ್ತೆ ಮತ್ತು ಡೇಟಾ ಸೈನ್ಸ್ ವಿಭಾಗ,
ಶ್ರೀದೇವಿ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್ ಅಂಡ್ ಟೆಕ್ನಾಲಜಿ

ಕರ್ನಾಟಕದ ಅಭಿವೃದ್ಧಿಯ ಕಥೆ ಹೇಳುವಾಗ ಬಹುತೇಕ ಎಲ್ಲ ದಾರಿಗಳೂ ಬೆಂಗಳೂರು ಎಂಬ ಒಂದೇ ನಗರಕ್ಕೆ ಹೋಗಿ ಸೇರುತ್ತವೆ. ಮಾಹಿತಿ ತಂತ್ರಜ್ಞಾನ, ಸ್ಟಾರ್ಟ್ ಅಪ್ ಸಂಸ್ಕೃತಿ, ಜಾಗತಿಕ ಹೂಡಿಕೆ, ಉದ್ಯೋಗ ಸೃಷ್ಟಿ ಎಲ್ಲವೂ ಬೆಂಗಳೂರಿನಲ್ಲೇ ಕೇಂದ್ರೀಕೃತವಾಗಿವೆ. ಈ ಏಕಕೇಂದ್ರಿತ ಬೆಳವಣಿಗೆ ರಾಜ್ಯಕ್ಕೆ ಅಪಾರ ಲಾಭ ತಂದಿದ್ದರೂ, ಇಂದು ಅದು ಗಂಭೀರ ಸವಾಲುಗಳನ್ನೂ ಎದುರಿಸುತ್ತಿದೆ. ಹೆಚ್ಚುತ್ತಿರುವ ಜನಸಂಖ್ಯೆ, ಸಂಚಾರದ ಒತ್ತಡ, ವಸತಿ ಸಮಸ್ಯೆ, ಮೂಲ ಸೌಕರ್ಯದ ಮೇಲಿನ ಹೊರೆ ಮತ್ತು ಜೀವನ ವೆಚ್ಚ – ಇವು ಬೆಂಗಳೂರು ತನ್ನ ಸಾಮರ್ಥ್ಯದ ಮಿತಿಗೆ ತಲುಪಿರುವುದನ್ನು ಸೂಚಿಸುತ್ತಿವೆ.

ಈ ಹಿನ್ನಲೆಯಲ್ಲಿ "ಬೆಂಗಳೂರಿನ ಹೊರಗಿರುವ ಕರ್ನಾಟಕ"ದ ಬಗ್ಗೆ ಗಂಭೀರ ಚಿಂತನೆ ಈಗ ಅನಿವಾರ್ಯವಾಗಿದೆ. ರಾಜ್ಯದ ದೀರ್ಘಕಾಲಿಕ ಮತ್ತು ಸಮತೋಲನವಾದ ಅಭಿವೃದ್ಧಿಯ ಎರಡನೆಯ ಹಂತದ ನಗರಗಳ ಪಾತ್ರ ನಿರ್ಣಾಯಕ. ಅಂತಹ ನಗರಗಳ ಪೈಕಿ ತುಮಕೂರು ವಿಶಿಷ್ಟ ಸ್ಥಾನವನ್ನು ಪಡೆದಿದೆ. ಭೌಗೋಳಿಕವಾಗಿ ಬೆಂಗಳೂರಿಗೆ ಅತ್ಯಂತ ಸಮೀಪದಲ್ಲಿರುವ, ಕೈಗಾರಿಕಾ ಹಿನ್ನೆಲೆ ಮತ್ತು ಶೈಕ್ಷಣಿಕ ಬಲ ಹೊಂದಿರುವ ಜಿಲ್ಲೆಯಾಗಿದ್ದರೂ, ಐಟಿ ಮತ್ತು ಸ್ಟಾರ್ಟ್‌ಅಪ್ ನಕ್ಷೆಯಲ್ಲಿ ತುಮಕೂರು ಇನ್ನೂ ನಿರೀಕ್ಷಿತ ಸ್ಥಾನವನ್ನು ಪಡೆದಿಲ್ಲ.

### ಕೈಗಾರಿಕಾ ಜಿಲ್ಲೆಯ ಮಿತಿಯನ್ನು ಮೀರುವ ಆವಶ್ಯಕತೆ

ತುಮಕೂರು ಬಹುಕಾಲದಿಂದಲೇ ಕರ್ನಾಟಕದ ಪ್ರಮುಖ ಕೈಗಾರಿಕಾ ಜಿಲ್ಲೆಗಳಲ್ಲೊಂದು. ಉತ್ಪಾದನಾ ಘಟಕಗಳು, ಕೈಗಾರಿಕಾ ಪ್ರದೇಶಗಳು, ರಕ್ಷಣಾ ಕ್ಷೇತ್ರಕ್ಕೆ ಮತ್ತು ಅಂತರಿಕ್ಷ ಇವುಗಳಿಗೆ ಸಂಬಂಧಿಸಿದ ಚಟುವಟಿಕೆಗಳು ಜಿಲ್ಲೆಗೆ ಆರ್ಥಿಕ ಸ್ಥಿರತೆಯನ್ನು ನೀಡಿವೆ. ಜಪಾನ್ ಇಂಡಸ್ಟ್ರಿಯಲ್ ಪಾರ್ಕ್, ತುಮಕೂರು ಇಂಡಸ್ಟ್ರಿಯಲ್ ಟೌನ್‌ಶಿಪ್, HAL–ISRO ಸಂಬಂಧಿತ ಪರಿಸರ ಮತ್ತು KWIN City ಮುಂತಾದ ಯೋಜನೆಗಳು ಜಿಲ್ಲೆಯ ಕೈಗಾರಿಕಾ ಭವಿಷ್ಯವನ್ನು ಸೂಚಿಸುತ್ತವೆ.

ಇಂದು ಜಾಗತಿಕ ಆರ್ಥಿಕತೆಯ ಸ್ವರೂಪವೇ ಬದಲಾಗಿದ್ದು ಮೌಲ್ಯಸೃಷ್ಟಿ ನಡೆಯುತ್ತಿರುವುದು ಕೇವಲ ಉತ್ಪಾದನಾ ಘಟಕಗಳಲ್ಲಿ ಅಲ್ಲ; ಅದು ಡಿಜಿಟಲ್ ತಂತ್ರಜ್ಞಾನ, ಐಟಿ ಸೇವೆಗಳು, ಸಂಶೋಧನೆ ಮತ್ತು ನವೋದ್ಯಮ ಆಧರಿಸಿದ ಸ್ಟಾರ್ಟ್‌ಅಪ್‌ಗಳಲ್ಲಿ ನಡೆಯುತ್ತಿದೆ. ಕೈಗಾರಿಕಾ ಜಿಲ್ಲೆಯಾಗಿರುವ ತುಮಕೂರು, ಈ ಜ್ಞಾನಾಧಾರಿತ ಆರ್ಥಿಕತೆಯೊಂದಿಗೆ ಸಮನ್ವಯವನ್ನು ಇನ್ನೂ ಸಮರ್ಪಕವಾಗಿ ಸಾಧಿಸಿಲ್ಲ. ಇಲ್ಲಿರುವುದು ಕೈಗಾರಿಕೆಯ ಕೊರತೆಯಲ್ಲ, ಕೈಗಾರಿಕೆ–ತಂತ್ರಜ್ಞಾನಗಳ ಸಮನ್ವಯದ ಕೊರತೆ.

### ಶಿಕ್ಷಣ ಮತ್ತು ಪ್ರತಿಭೆ: ಬಳಕೆಯಾಗದ ಶಕ್ತಿ

ತುಮಕೂರು ಜಿಲ್ಲೆಯ ಮತ್ತೊಂದು ದೊಡ್ಡ ಬಲವೇ ಅದರ ಶೈಕ್ಷಣಿಕ ಪರಿಸರ. ಜಿಲ್ಲೆಯಲ್ಲಿ ಎಂಟಕ್ಕೂ ಹೆಚ್ಚು ಎಂಜಿನಿಯರಿಂಗ್ ಕಾಲೇಜುಗಳು, ನಾಲ್ಕು ವೈದ್ಯಕೀಯ ಕಾಲೇಜುಗಳು ಹಾಗೂ ಅನೇಕ ತಾಂತ್ರಿಕ ಶಿಕ್ಷಣ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಕೃತಕ ಬುದ್ಧಿಮತ್ತೆ, ಡೇಟಾಸೈನ್ಸ್, ಸಾಫ್ಟ್‌ವೇರ್ ಎಂಜಿನಿಯರಿಂಗ್, ಸೈಬರ್–ಭದ್ರತೆ, ಎಲೆಕ್ಟ್ರಾನಿಕ್ಸ್ ಮತ್ತು ಎಂಬೆಡೆಡ್ ಸಿಸ್ಟಮ್ಸ್ ಕ್ಷೇತ್ರಗಳಲ್ಲಿ ತರಬೇತಿ ಪಡೆದ ಸಾವಿರಾರು ಯುವಕರು ಪ್ರತಿವರ್ಷ ಇಲ್ಲಿಂದ ಹೊರಬರುತ್ತಿದ್ದಾರೆ.

NAAC 'A' ಗ್ರೇಡ್ ಸಂಸ್ಥೆಗಳು, ಸಂಶೋಧನಾ ಅನುಭವ ಹೊಂದಿದ ಅಧ್ಯಾಪಕರು, ಕೈಗಾರಿಕಾ ಸಂಪರ್ಕ – ಇವೆಲ್ಲವೂ ಇದ್ದರೂ, ಇಲ್ಲಿನ ಪ್ರತಿಭೆಯು ಉದ್ಯಮವಾಗಿ ಪರಿವರ್ತನೆಯಾಗುತ್ತಿಲ್ಲ ಮತ್ತು ಸ್ಥಳೀಯವಾಗಿ ಉದ್ಯೋಗವನ್ನು ಒದಗಿಸುವ ಮಟ್ಟವನ್ನು ತಲುಪಿಲ್ಲ. ಬಹುತೇಕ ಯುವಕರು ಉತ್ತಮ ಅವಕಾಶಗಳಿಗಾಗಿ ಬೆಂಗಳೂರು, ಹೈದರಾಬಾದ್ ಮತ್ತು ಪುಣೆಗೆ ವಲಸೆ ಹೋಗುತ್ತಾರೆ.

ಇದು ಅವರ ವ್ಯಕ್ತಿಗತ ಮಟ್ಟದಲ್ಲಿ ಯಶಸ್ಸೆಂದು ಪರಿಗಣಿತವಾಗಬಹುದು; ಆದರೆ ಜಿಲ್ಲೆಯ ದೃಷ್ಟಿಯಿಂದ ಇದು ನಿರಂತರವಾಗಿ ನಡೆಯುತ್ತಿರುವ ಮಾನವ ಸಂಪನ್ಮೂಲದ ನಷ್ಟ.

▶▶ 4ನೇ ಪುಟಕ್ಕೆ...

# ದೇಶದ 140 ಕೋಟಿ ಜನರ ಆರೋಗ್ಯಕ್ಕೆ ಭದ್ರತೆ ನೀಡುವವರು ಯಾರು?

▶▶ ಮೊದಲನೇ ಪುಟದಿಂದ

ಈಗ ವೈದ್ಯಕೀಯಲೋಕದಲ್ಲಿ ಅವಿಷ್ಕಾರಗಳು ದೊಡ್ಡ ಪ್ರಮಾಣದಲ್ಲಿ ನಡೆದಿವೆ. ನಮ್ಮ ಕಾಲದಲ್ಲಿ ಎಕ್ಸ್‌ರೇ ಹೊರತುಪಡಿಸಿದರೆ ಉಳಿದ ಯಾವ ಸೌಲಭ್ಯವೂ ದೊರೆಯುತ್ತಿರಲಿಲ್ಲ. ಈಗ ಅಲ್ಟ್ರಾಸೌಂಡ್, ಸಿ.ಟಿ. ಸ್ಕ್ಯಾನ್, ಎಂ.ಆರ್.ಐ ಮೊದಲಾದ ಆಧುನಿಕ ವೈದ್ಯಕೀಯ ಉಪಕರಣಗಳು ವೈದ್ಯಕೀಯ ಲೋಕಕ್ಕೆ ಒದಗಿರುವುದು ರೋಗಿಗೆ ವರದಾನವಾಗಿದೆ. ಹಳ್ಳಿಯ ರೈತನಾಗಿರಬಹುದು ಅಥವಾ ಆರ್ಥಿಕವಾಗಿ ದುರ್ಬಲನಾಗಿರಬಹುದು. ಎಲ್ಲರಿಗೂ ಈ ಸೌಲಭ್ಯ ದೊರೆಯಬೇಕೆಂಬುದು ವೈದ್ಯಶಾಸ್ತ್ರದ ಗುರಿಯಾಗಿದೆ.

ಆಗ ಆ ಪ್ರಕರಣದಲ್ಲಿ ನಾನೇ ಪೇಶೆಂಟ್‌ಗೆ ಮೊದಲು ಪರೀಕ್ಷೆ ಮಾಡಿದೆ. ಆತನನ್ನು ಮುಟ್ಟಿ ನೋಡಿದಾಗ ಹೊಟ್ಟೆ ಎಡಪಾರ್ಶ್ವದಲ್ಲಿ ನೋವಿತ್ತು. ನೋವಿಗೆ ಮೂತ್ರಪಿಂಡದಲ್ಲಿ ಊತವಿರಬಹುದು (Hydronephrosis) ಎಂದು ಭಾವಿಸಿದೆ. ಮೂತ್ರದ ಸೋಂಕಿನಿಂದಾಗಿ ಜ್ವರ ಮತ್ತು ಹೊಟ್ಟೆನೋವು ಬಂದಿತ್ತು. ಅದಕ್ಕಾಗಿ ಮೂತ್ರ ಹಾಗೂ ರಕ್ತಪರೀಕ್ಷೆ ಜೊತೆಗೆ ಅಲ್ಟ್ರಾಸೌಂಡ್ ಸ್ಕ್ಯಾನ್ ಮಾಡಿಸಿದೆ. ಅದರ ರಿಪೋರ್ಟ್ ನೋಡಿದಾಗ ಮೂತ್ರಪಿಂಡದಲ್ಲಿ ಅಸಂಖ್ಯಾತ ಕಲ್ಲುಗಳಿದ್ದವು. ಅದರಿಂದ ಮೂತ್ರಪಿಂಡದಿಂದ ಮೂತ್ರನಾಳಕ್ಕೆ ಮೂತ್ರವು ಹರಿಯುವ ಮಾರ್ಗದಲ್ಲಿ (Pelviureteric Junction (PUJ) Obstruction) ಅಡಚಣೆಯಾಗಿತ್ತು. ಇದು ಹುಟ್ಟಿನಿಂದ ಬಂದಿರಬಹುದು. ಕಲ್ಲುಗಳಿಂದ ಆಗಿರಬಹುದು ಅಥವಾ ಸೋಂಕಿನಿಂದಲೂ ಬಂದಿರಬಹುದು. ಇದನ್ನು ತುರ್ತು ವೈದ್ಯಕೀಯ ಸ್ಥಿತಿ ಎಂದು ಭಾವಿಸಿ ಮತ್ತೇ ಸಿ.ಟಿ. ಸ್ಕ್ಯಾನ್ ಮಾಡಿಸಿದೆ. ಮೂತ್ರಪಿಂಡದ ಕಾರ್ಯವಿಧಾನ ಕಂಡುಹಿಡಿಯಲು ಐ.ವಿ.ಪಿ. (Intravenous Pyelogram) (IVP) ಮಾಡಿಸಲಾಯಿತು. ಆಗ ನನಗೆ ಈ ಪೇಶೆಂಟ್‌ಗೆ ಮೂತ್ರಪಿಂಡದ ಸಮಸ್ಯೆಯಿದೆ ಎನ್ನುವುದು ಅರಿವಾಯಿತು. ಸಿ.ಟಿ.ಸ್ಕ್ಯಾನ್ ಮಾಡಿಸಿದಾಗ ಎಡಭಾಗದ ಮೂತ್ರಪಿಂಡವು ಊದಿಕೊಂಡಿರುವುದು ತಿಳಿಯಿತು. ಮೂತ್ರಪಿಂಡದಲ್ಲಿ ಕಲ್ಲುಗಳಿವೆ ಎನ್ನುವುದು ತಿಳಿಯಿತು. ಪೆಲ್ವಿಸ್ (pelvis) ಮೂತ್ರಪಿಂಡದ ಕೊನೆಯ ಭಾಗ. ಮೂತ್ರನಾಳ ಮಧ್ಯೆ ಸಣ್ಣದಾಗಿದ್ದು, ಮೂತ್ರವು ಸರಿಯಾಗಿ ಹರಿದು ಹೋಗುತ್ತಿರಲಿಲ್ಲ. ಅದರಿಂದಾಗಿ ಸೋಂಕು ಆಗಿ ಕಲ್ಲುಗಳು ಉಂಟಾಗಿದ್ದವು. ಮೂತ್ರಪಿಂಡ ದೊಡ್ಡದಾಗಿತ್ತು. ಹೀಗೆ ದೊಡ್ಡದಾಗಿದ್ದರೆ ಅದನ್ನು Hydronephrosis ಎಂದು ಕರೆಯುತ್ತಾರೆ. ಅದನ್ನು ಹಾಗೇ ಬಿಟ್ಟರೆ ಮೂತ್ರಪಿಂಡದ ಸಮಸ್ಯೆಗೂ ಕಾರಣವಾಗುತ್ತಿತ್ತು. ಕೊನೆಗೆ ಮೂತ್ರಪಿಂಡದ ವೈಫಲ್ಯಕ್ಕೂ ಕಾರಣವಾಗಬಹುದು. ಈ ಕಾಯಿಲೆಯು ಹುಟ್ಟಿನಿಂದಲೂ ಬರಬಹದು ಅಥವಾ ಸೋಂಕಿನಿಂದ ಬರಬಹುದು. ಬಂದಮೇಲೆ ಅದನ್ನು ಸೂಕ್ತ ಶಸ್ತ್ರಚಿಕಿತ್ಸೆಯಿಂದ ಗುಣಪಡಿಸಿಕೊಳ್ಳದಿದ್ದರೆ ತುಂಬಾ ಕಷ್ಟವನ್ನು ಅನುಭವಿಸಬೇಕಾಗುತ್ತದೆ.

ಮೂತ್ರನಾಳದಲ್ಲಿ ಮೂತ್ರವು ಸಲೀಸಾಗಿ ಹರಿಯುವಂತೆ ಮಾಡಲು ಪೈಲೋಪ್ಲಾಸ್ಟಿ (Pyeloplasty) ಶಸ್ತ್ರಚಿಕಿತ್ಸೆ ಚಿಕಿತ್ಸೆ ಮಾಡಲು ನಿರ್ಧಾರ ಮಾಡಿದೆ. ಮೂತ್ರನಾಳದಲ್ಲಿ ಉಂಟಾಗುವ ಅಡಚಣೆಯನ್ನು ನಿವಾರಿಸುವ ಶಸ್ತ್ರಚಿಕಿತ್ಸೆ ಇದಾಗಿರುತ್ತದೆ. ಈಗ ಈ ಶಸ್ತ್ರಚಿಕಿತ್ಸೆಯನ್ನು ಲ್ಯಾಪ್ರೋಸ್ಕೋಪಿಕ್ ಅಥವಾ ರೋಬೆಟ್ ಬಳಸಿ ಮೂತ್ರನಾಳದಲ್ಲಿ ಉಂಟಾಗಿದ್ದ ಅಡಚಣೆಯ ಭಾಗವನ್ನು ಛೇದಿಸಿ, ಅನಂತರ ಸ್ಟಂಟ್ ಹಾಕಿ ಮತ್ತೆ ಮೂತ್ರಪಿಂಡಕ್ಕೆ ಜೋಡಿಸುತ್ತಾರೆ. ಹೊಸನಾಳವನ್ನು ಅಳವಡಿಸುತ್ತಾರೆ. ಇದನ್ನು 'ಡಿಸಮೆಂಬರ್ಡ್ ತಂತ್ರ' ಎಂದು ಕರೆಯಲಾಗುತ್ತದೆ. ಅನಂತರ ಮೂತ್ರನಾಳದಲ್ಲಿ ಮೂತ್ರವು ಸರಿಯಾಗಿ ಹರಿಯುತ್ತದೆ. ಈ ಶಸ್ತ್ರಚಿಕಿತ್ಸೆಯು ಅತ್ಯಂತ ಸುರಕ್ಷಿತವಾಗಿರುತ್ತದೆ. ರೋಗಿಗೆ ಯಾವುದೇ ನೋವಿರುವುದಿಲ್ಲ. ಇದಕ್ಕೆ ಚೇತರಿಕೆಯ ಸಮಯ ಕೂಡ ಹೆಚ್ಚು ಬೇಕಾಗುವುದಿಲ್ಲ. ಎರಡು ವಾರಗಳ ಅನಂತರ ಹಿಂದೆ ಅಳವಡಿಸಿದ್ದ ಸ್ಟಂಟ್ ತೆಗೆದು ಹಾಕಲಾಗುತ್ತದೆ. ಪೈಲೊಪ್ಲಾಸ್ಟಿಯಲ್ಲಿ ಮೂತ್ರವಿಸರ್ಜನಾ ಕ್ರಿಯೆಯ ಪುನರ್ ಸ್ಥಾಪನಾ ಕಾರ್ಯದ ಯಶಸ್ಸಿನ ಪ್ರಮಾಣವು ಅತ್ಯುತ್ತಮವಾಗಿರುತ್ತದೆ. ಮೂತ್ರಪಿಂಡಕ್ಕೆ ಸೋಂಕು ತಗಲದಂತೆ ಹಾಗೂ ರಕ್ತಸ್ರಾವವಾಗದಂತೆ ನೋಡಿಕೊಳ್ಳುವ ಜವಾಬ್ದಾರಿ ವೈದ್ಯರ ಮೇಲಿರುತ್ತದೆ.



25 ವರ್ಷಗಳ ಹಿಂದೆ ನಾನು ಲ್ಯಾಪ್ರೋಸ್ಕೋಪಿಕ್ ಇಲ್ಲದ ಸಂದರ್ಭದಲ್ಲಿ ಮ್ಯಾನುಯೆಲ್ ಆಗಿ ಈ ಶಸ್ತ್ರಚಿಕಿತ್ಸೆ ಮಾಡುತ್ತಿದ್ದೆ. ಆಗಲೂ ಚೇತರಿಕೆಯ ಪ್ರಮಾಣ ಬಹಳ ಉತ್ತಮವಾಗಿಯೇ ಇರುತ್ತಿತ್ತು. ನನ್ನ ಆ ರೋಗಿಯ ಮೂತ್ರಕೋಶದಲ್ಲಿ 57 ಕಲ್ಲುಗಳಿದ್ದವು. ಶಸ್ತ್ರಚಿಕಿತ್ಸೆ ಮಾಡಿ ಎಲ್ಲಾ ಕಲ್ಲುಗಳನ್ನು ತೆಗೆದೆ. ಈಗ ಸಹ ಇಷ್ಟೊಂದು ಕಲ್ಲುಗಳಿದ್ದರೆ ಸಾಮಾನ್ಯವಾಗಿ ಮ್ಯಾನುಯಲ್ ಆಪರೇಷನ್ನೇ ಎಲ್ಲರೂ ಆಯ್ಕೆ ಮಾಡಿಕೊಳ್ಳುತ್ತಾರೆ. ನಮ್ಮ ರೋಗಿಯನ್ನು ಹಾಗೇ ಸ್ವಲ್ಪದಿನ ಬಿಟ್ಟಿದ್ದರೆ ಆತನ ಜೀವಕ್ಕೆ ತುಂಬಾ ಅಪಾಯವಿರುತ್ತಿತ್ತು. ಶಸ್ತ್ರಚಿಕಿತ್ಸೆಯ ನಂತರ ಐದಾರು ದಿನ ಆತ ಸುಧಾರಿಸಿಕೊಂಡು ಮನೆಗೆ ಹೋದ. ಆಗಾಗ ಬಂದು ಪರೀಕ್ಷೆ ಮಾಡಿಸಿಕೊಂಡು ಹೋಗುತ್ತಿದ್ದ.

ನಾನು ಯಾವಾಗಲೂ ನನ್ನ ಸಹೋದ್ಯೋಗಿಗಳಿಗೆ ಹೇಳುವುದೇನೆಂದರೆ ಪೇಶಂಟ್‌ನ ಆರ್ಥಿಕಸ್ಥಿತಿಯನ್ನು ನೋಡಬೇಡಿ. ವೈದ್ಯಕೀಯ ಕ್ಷೇತ್ರದಲ್ಲಿ ಆಗಿರುವ ಎಲ್ಲಾ ಆವಿಷ್ಕಾರಗಳನ್ನು ಪೇಶೆಂಟ್‌ಗೆ ಅಗತ್ಯವಿದ್ದಾಗ ಯಾವುದೇ ತಾರತಮ್ಯವಿಲ್ಲದೆ ನೀಡಿ. ವಿಜ್ಞಾನದ ಸಾರ್ಥಕತೆ ಇರುವುದು ಎಲ್ಲಾ ಅಗತ್ಯವಿರುವವರಿಗೆ ಅದರ ಪ್ರಯೋಜನ ದೊರೆತಾಗ ಮಾತ್ರ. ಇಂದಿಗೂ ನನ್ನ ಆ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ. ಇಂದು ವೈದ್ಯಕೀಯ ಚಿಕಿತ್ಸೆ ತುಂಬಾ ದುಬಾರಿಯಾಗಿರುವ ಕಾರಣ ಆರ್ಥಿಕ ದುರ್ಬಲ ವ್ಯಕ್ತಿಗಳಿಗೆ ಅಷ್ಟೇ ಏಕೆ ಎಲ್ಲರಿಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಹಾಯದ ಹಸ್ತ ಚಾಚುವ ಅಗತ್ಯವಿದೆ.

## ರೋಗಿಗೆ ಆಯ್ಕೆಯ ಅವಕಾಶವಿರಬೇಕು

ಈಗ ಮೂತ್ರಪಿಂಡದ ಸಮಸ್ಯೆಯ ಜೊತೆಗೆ ಕ್ಯಾನ್ಸರ್, ಹೃದಯಾಘಾತ, ಪಾರ್ಶ್ವವಾಯು ಸೇರಿದಂತೆ ಇತರ ನ್ಯೂರೋ ಕಾಯಿಲೆಗಳು ಎಲ್ಲೆಡೆ ಧಾಳಾಗಿ ಕಂಡುಬರುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮ ಜನತೆಯ ಅನುಕೂಲಕ್ಕಾಗಿ 'ಆಯುಷ್ಮಾನ್ ಭಾರತ್' 'ಪ್ರಧಾನಮಂತ್ರಿ ಜನಆರೋಗ್ಯ ಯೋಜನೆ' 'ಮಹಾತ್ಮ ಜ್ಯೋತಿ ಫುಲೆ ಜನ ಆರೋಗ್ಯ ಯೋಜನೆ' 'ರಾಷ್ಟ್ರೀಯ ಸ್ವಾಸ್ಥ್ಯ ಭೀಮಾ ಯೋಜನೆ' 'ಪ್ರಧಾನ ಮಂತ್ರಿ ಸುರಕ್ಷಾ ಭೀಮಾಯೋಜನೆ' ಕರ್ನಾಟಕರಾಜ್ಯ ಸರ್ಕಾರದ 'ಆಯುಷ್ಮಾನ್ ಕರ್ನಾಟಕ ಆರೋಗ್ಯ ಯೋಜನೆ', 'ಯಶಸ್ವಿನಿ' ಹಾಗೂ 'ಧರ್ಮಸ್ಥಳದ ಆರೋಗ್ಯ ಯೋಜನೆ' ಮೊದಲಾದ ಹತ್ತಾರು ಕಲ್ಯಾಣ ಕಾರ್ಯಕ್ರಮಗಳು ಅರೋಗ್ಯ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಅಸ್ತಿತ್ವದಲ್ಲಿವೆ. ಈ ಯೋಜನೆಗಳ ಮುಖ್ಯ ಉದ್ದೇಶ ರೋಗಿಗಳು ತಮಗೆ ಬೇಕಾದ ಆಸ್ಪತ್ರೆಯನ್ನು ಆಯ್ಕೆ ಮಾಡಿಕೊಂಡು ಚಿಕಿತ್ಸೆ ಪಡೆಯುವುದಾಗಿರುತ್ತದೆ.

ಹಿಂದಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರೊಬ್ಬರು ಖಾಸಗಿ ವೈದ್ಯಕೀಯ ಕಾಲೇಜು ಆಸ್ಪತ್ರೆಗಳು ಸೇರಿದಂತೆ ಬೇರೆ, ಬೇರೆ ಕಡೆ ಚಿಕಿತ್ಸೆ ಪಡೆಯುತ್ತಿದ್ದ ರೋಗಿಗಳ ಆಯ್ಕೆಗೆ ಕಂಟಕವನ್ನು ತಂದಿಟ್ಟಿದ್ದಾರೆ. ಯಾವುದೇ ರೋಗಿ ತನಗೆ ಇಷ್ಟ ಬಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ಮುನ್ನ ಸರ್ಕಾರಿ ಆಸ್ಪತ್ರೆಯಲ್ಲಿ ಎನ್.ಓ.ಸಿ. ಪಡೆಯಬೇಕಾಗಿರುತ್ತದೆ. ಇದು ರೋಗಿಯ ಪಾಲಿಗೆ ದೊಡ್ಡತಲೆ ನೋವಾಗಿದೆ. ಈಗ ಕಾಯಿಲೆಯಿಂದ ನರಳುತ್ತಿರುವ ಪೇಶೆಂಟ್ ಹಾಗೂ ಆತನ ಸಹಾಯಕರು ಸರ್ಕಾರಿ ಆಸ್ಪತ್ರೆಗೆ ಅಲೆಯಬೇಕಾದ ಪರಿಸ್ಥಿತಿಯಿದೆ.

ಸಾಮಾನ್ಯವಾಗಿ ಗ್ರಾಮೀಣ ಪ್ರದೇಶದಲ್ಲಿರುವ ಜನ ತಾಲೂಕು ಆಸ್ಪತ್ರೆಗೆ ಹೋದರೆ ಅವರು ಜಿಲ್ಲಾ ಆಸ್ಪತ್ರೆಗೆ ಶಿಫಾರಸ್ಸು ಮಾಡುತ್ತಾರೆ. ಜಿಲ್ಲಾಸ್ಪತ್ರೆಯಲ್ಲಿ ನಿರ್ಧಾರ ತೆಗೆದುಕೊಳ್ಳಲು ಸಾಕಷ್ಟು ಸಮಯ ಹಿಡಿಯುತ್ತದೆ. ಕೊನೆಗೂ ಪೇಶೆಂಟ್‌ಗೆ ನಿರಾಕ್ಷೇಪಣಾ ಪತ್ರ ಸಿಗುವುದಿಲ್ಲ. ಜಿಲ್ಲಾಸ್ಪತ್ರೆಯಲ್ಲಿ ಮೂಲಭೂತ ಸೌಕರ್ಯ ಹಾಗೂ ಅಗತ್ಯ ವೈದ್ಯಕೀಯ ಸಿಬ್ಬಂದಿಯ ಕೊರತೆಯಿದ್ದರೂ ಅಲ್ಲಿನ ಹಿರಿಯ ಅಧಿಕಾರಿಗಳು ಸರ್ಕಾರಕ್ಕೆ ಹೆದರಿ ಎನ್.ಓ.ಸಿ ಕೊಡುವುದಿಲ್ಲ.

ಅಲ್ಲದೆ, ಕೆಲವು ಆಪರೇಷನ್‌ಗಳನ್ನು ಸರ್ಕಾರಿ ಆಸ್ಪತ್ರೆಯ ವೈದ್ಯರೇ ಮಾಡಿದಾಗ ಅದರಿಂದ ಅವರಿಗೆ ಆರ್ಥಿಕ ಲಾಭವು ಉಂಟಾಗುತ್ತದೆ. ಆದರೆ ಇಲ್ಲಿ ಮುಖ್ಯವಾಗಿರುವುದು ರೋಗಿಯ ಸಂರಕ್ಷಣೆ. ಇಂತಹ ಕಲ್ಯಾಣ ಯೋಜನೆಗಳಿರುವುದು ರೋಗಿಯ ಹಿತಕ್ಕಾಗಿ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ರೋಗಿ ತಾನು ಬಯಸಿದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ಹಕ್ಕನ್ನು ಹೊಂದಿರುತ್ತಾನೆಂಬ ಪ್ರಾಥಮಿಕ ತಿಳುವಳಿಕೆಯನ್ನು ನಾವೆಲ್ಲ ರೂಡಿಸಿಕೊಳ್ಳಬೇಕಾಗಿದೆ.

ಪ್ರಸ್ತುತ ಕರ್ನಾಟಕ ಸರ್ಕಾರದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾಗಿರುವ ಮಾನ್ಯ ಶ್ರೀ ದಿನೇಶ್ ಗುಂಡೂರಾವ್ ಅವರು ಸಂವೇದನಾಶೀಲರು, ಸಮಸ್ಯೆಗಳನ್ನು ಸಮರ್ಥವಾಗಿ ಗ್ರಹಿಸಿ ಪರಿಹಾರ ಕೊಡಬಲ್ಲ ಸಚಿವರೆಂದು ಖ್ಯಾತಿಗಳಿಸಿದ್ದಾರೆ. ಮಾನ್ಯ ಸಚಿವರು ಈ ಕಡೆ ಗಮನಹರಿಸಿ, ಈ ಯೋಜನೆಯ ಫಲಾನುಭವಿಗಳಿಗೆ ಆಯ್ಕೆಯ ಸ್ವಾತಂತ್ರ್ಯ ಕೊಡಬೇಕೆಂದು ಕೋರುತ್ತೇನೆ. ಎಲ್ಲ ರೋಗಿಗಳಿಗೂ ಆಯ್ಕೆ ಸ್ವಾತಂತ್ರವಿದ್ದರೆ ಆತ ಸರ್ಕಾರಿ ಆಸ್ಪತ್ರೆಯನ್ನು ಆಯ್ಕೆ ಮಾಡಿಕೊಳ್ಳಬಹುದು. ತನಗೆ ವಿಶ್ವಾಸವಿದ್ದ ಖಾಸಗಿ ಆಸ್ಪತ್ರೆಯನ್ನು ಆಯ್ಕೆ ಮಾಡಿಕೊಳ್ಳಬಹುದು. ಆಯ್ಕೆಯ ಸ್ವಾತಂತ್ರ್ಯವಿಲ್ಲದಿದ್ದಾಗ ಸಂಕಟ ಅನುಭವಿಸುವವರು ರೋಗಿಗಳು ಎನ್ನುವುದನ್ನು ನಾವು ಮರೆಯಬಾರದು.

## ಆರೋಗ್ಯವಲಯದ ದೃಷ್ಟಿಯಿಂದ ಸಮಾಧಾನಕರವಾಗಿರುವ ಕೇಂದ್ರ ಆಯವ್ಯಯ

2026 ಫೆಬ್ರವರಿ ಒಂದರಂದು ಭಾರತ ಸರ್ಕಾರದ ಹಣಕಾಸು ಸಚಿವರಾದ ಶ್ರೀಮತಿ ನಿರ್ಮಲ ಸೀತಾರಾಮನ್ ಮಂಡಿಸಿದ 2026–27ರ ಆಯವ್ಯಯದಲ್ಲಿ ಆರೋಗ್ಯ ಕ್ಷೇತ್ರಕ್ಕೆ 1,06,53.42 ಕೋಟಿ ರೂಗಳನ್ನು ಒದಗಿಸಿದ್ದಾರೆ. ಕಳೆದ ವರ್ಷಕ್ಕಿಂತ ಶೇಕಡ 10ರಷ್ಟು ಹೆಚ್ಚಿನ ಮೊತ್ತವನ್ನು ಆರೋಗ್ಯ ಕ್ಷೇತ್ರಕ್ಕೆ ಒದಗಿಸಲಾಗಿದೆ ಎಂದು ಸಚಿವರು ಹೇಳಿದ್ದಾರೆ.

ಜಾಗತಿಕವಾಗಿ ಭಾರತವನ್ನು ಔಷದ ತಯಾರಿಕಾ ಕ್ಷೇತ್ರದಲ್ಲಿ ಮುಂಚೂಣಿಗೆ ತರಲು 'ರಾಷ್ಟ್ರೀಯ ಔಷಧ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ'ಯನ್ನು (National Institues of Pharmaceutical Education and



Research - NIPER) ಪ್ರಾರಂಭಿಸಿರುವುದು ಸ್ವಾಗತಾರ್ಹವಾಗಿದೆ.

ಮುಂದಿನ ಐದು ವರ್ಷಗಳಲ್ಲಿ ಒಂದು ಲಕ್ಷ 'ಅಲೈಡ್ ಹೆಲ್ತ್ ಕೇರ್ ಪ್ರೊಫೆಷನಲ್' ವೃತ್ತಿಪರರನ್ನು ಸೃಷ್ಟಿ ಮಾಡುವುದು ಭಾರತ ಸರ್ಕಾರದ ಗುರಿಯನ್ನು ಈ ಆಯವ್ಯಯದಲ್ಲಿ ಹೇಳಲಾಗಿದೆ. 'ನೇತ್ರ ತಪಾಸಣಾ ಶಾಸ್ತ್ರ' (Optometry) 'ವಿಕಿರಣಶಾಸ್ತ್ರ' (Radiology) 'ಅರಿವಳಿಕೆ ಶಾಸ್ತ್ರ' (Anaesthesiology) 'ಶಸ್ತ್ರಚಿಕಿತ್ಸಾ ತಂತ್ರಜ್ಞಾನ' (Technology for Surgery) 'ಆನ್ವಯಿಕ ಮನೋವಿಜ್ಞಾನ' (Applied Psychology) ಮತ್ತು 'ವರ್ತನಾ ಆರೋಗ್ಯ' (Behavioural Health) ಮುಂತಾದ ಹತ್ತು ವೈದ್ಯಕೀಯ ವಿಜ್ಞಾನ ಶಾಖೆಗಳಲ್ಲಿ ವೃತ್ತಿಪರರನ್ನು ಸೃಷ್ಟಿಸುವುದು ಭಾರತ ಸರ್ಕಾರದ ಗುರಿಯೆಂದು ಹೇಳಲಾಗಿದೆ. ಇದರಿಂದ ನಿರುದ್ಯೋಗ ಸಮಸ್ಯೆಗೂ ಪರಿಹಾರ ದೊರೆಯುತ್ತದೆ ಮತ್ತು ದೇಶದ ಆರೋಗ್ಯ ವಲಯಕ್ಕೆ ಅಗತ್ಯವಿರುವ ಸಂಪನ್ಮೂಲವ್ಯಕ್ತಿಗಳು ದೊರೆಯುತ್ತಾರೆ.

ವೃದ್ಧರ ಆರೈಕೆಗೆ ಸಂಬಂಧಪಟ್ಟಂತೆ ರಾಷ್ಟ್ರೀಯ ಕೌಶಲ ಚೌಕಟ್ಟಿನ ಅಡಿಯಲ್ಲಿ (National Skill Qualification Framework - NSQF) 1.50 ಲಕ್ಷ ಆರೋಗ್ಯ ಕಾರ್ಯಕರ್ತರನ್ನು ತರಬೇತು ಮಾಡುವ ತನ್ನ ಉದ್ದೇಶವನ್ನು ಭಾರತ ಸರ್ಕಾರ ಈ ಆಯವ್ಯಯದಲ್ಲಿ ಹೇಳಿದೆ.

ಭಾರತ ಇಂದು ವೈದ್ಯಕೀಯ ಪ್ರವಾಸಗಳಿಗಾಗಿ ವಿಶ್ವದಲ್ಲೇ ಹೆಚ್ಚು ಆಕರ್ಷಕ ತಾಣವಾಗಿದೆ. ವಿಶ್ವದ ಎಲ್ಲೆಡೆಯಿಂದ ಉತ್ತಮ ಚಿಕಿತ್ಸೆಗಾಗಿ ಪ್ರವಾಸಿಗರು ಭಾರತಕ್ಕೆ ಬರುತ್ತಿದ್ದಾರೆ. ಇದನ್ನು ಗಮನದಲ್ಲಿಟ್ಟುಕೊಂಡು ಭಾರತ ಸರ್ಕಾರ ದೇಶದ ಐದು ಸ್ಥಳಗಳಲ್ಲಿ ಖಾಸಗಿ ಸಹಯೋಗದಲ್ಲಿ ಪ್ರಾದೇಶಿಕ ವೈದ್ಯಕೀಯ ಕೇಂದ್ರಗಳನ್ನು ಸ್ಥಾಪಿಸಲು ನಿರ್ಧಾರ ಮಾಡಿದೆ. ಆರ್ಥಿಕ ಮತ್ತು ಆರೋಗ್ಯ ಕ್ಷೇತ್ರಗಳ ದೃಷ್ಟಿಯಿಂದ ಇದು ಉತ್ತಮ ನಿರ್ಧಾರವಾಗಿದೆ. ವೈದ್ಯಕೀಯ ಪ್ರವಾಸೋದ್ಯಮದಿಂದ ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಕ್ಷೇತ್ರಗಳು ಪ್ರಯೋಜನವನ್ನು ಪಡೆಯಬಹುದು. ಈ ವಲಯದಲ್ಲಿ ಉದ್ಯೋಗ ಸೃಷ್ಟಿಯಾಗಬಹುದು.

ಇದರ ಜೊತೆಗೆ ಭಾರತೀಯ ವೈದ್ಯಕೀಯ ಪದ್ಧತಿಯಾಗಿರುವ ಆಯುರ್ವೇದ ಗರಿಷ್ಠ ಪ್ರಯೋಜನವನ್ನು ಈ ಆಯವ್ಯಯದ ಮೂಲಕ ಪಡೆದಿದೆ. ಈ ಆಯವ್ಯಯದಲ್ಲಿ ಮೂರು ಆಯುರ್ವೇದ ವಿಶ್ವವಿದ್ಯಾಲಯಗಳ ಸ್ಥಾಪನೆಯ ಪ್ರಸ್ತಾವ ಮಾಡಲಾಗಿದೆ.

ಇಷ್ಟಾದರೂ ಭಾರತದ ಆರೋಗ್ಯವಲಯಕ್ಕೆ ಉತ್ತಮ ಆರ್ಥಿಕ ನೆರವು ದೊರಕಿದೆ ಎನ್ನುವ ಹಾಗಿಲ್ಲ. 2024–25ರ ಅವಧಿಯಲ್ಲಿ ಆರೋಗ್ಯವಲಯಕ್ಕೆ ದೇಶದ ಜಿಡಿಪಿಯ ಶೇಕಡ 1.4ರಷ್ಟು ಸಂಪನ್ಮೂಲವನ್ನು ಒದಗಿಸಲಾಗಿತ್ತು. ಈ ವರ್ಷ ಜಿಡಿಪಿಯ 1.9ರಷ್ಟು ಸಂಪನ್ಮೂಲವನ್ನು ಒದಗಿಸಲಾಗಿದೆ. ಅಮೆರಿಕಾ ದೇಶದಲ್ಲಿ ಜಿಡಿಪಿಯ ಶೇಕಡ 18ರಷ್ಟು ಸಂಪನ್ಮೂಲವನ್ನು ಆರೋಗ್ಯ ವಲಯಕ್ಕೆ ಒದಗಿಸಲಾಗುತ್ತಿದೆ.

ಕೊನೆಯ ಪಕ್ಷ ಭಾರತದಲ್ಲಿ ಜಿಡಿಪಿಯ ಶೇಕಡಾ 4ರಷ್ಟು ಸಂಪನ್ಮೂಲವನ್ನು ಆರೋಗ್ಯವಲಯಕ್ಕೆ ನೀಡಿದರೆ, ಭಾರತದಲ್ಲಿನ ಅನೇಕ ಆರೋಗ್ಯ ಸಮಸ್ಯೆಗಳು ಶೀಘ್ರವಾಗಿ ಪರಿಹಾರ ಕಾಣಬಹುದು.

▪ ನಿರೂಪಣೆ: ಶ್ರೀವತ್ಸ

**ಪತ್ರಿಕೆಯ ಬಳಗ**

ಸಹಾಯಕ ಸಂಪಾದಕರು
**ಅಂಬಿಕಾ ಎಂ. ಹುಲಿನಾಯ್ಕರ್**

ಸಂಯೋಜಕ ಸಂಪಾದಕರು
**ಎಂ.ಎಸ್.ಪಾಟೀಲ್**

ಸಲಹಾ ಸಂಪಾದಕರು
**ಎನ್.ಭಾರತಿ**

ಸಂಪಾದಕ ಮಂಡಲಿ
**ಡಾ. ಭವಾನಿ ಸ್ಟಾಲಿನ್**
**ಡಾ. ಮನೋನ್ಮಣಿ ಎಂ.ಎಚ್**
**ಡಾ. ಲಾವಣ್ಯ ರಮಣ**

ಸಹಾಯಕ ಸಂಪಾದಕರು:
**ಎನ್. ಆನಂದ**

ಪುಟ ವಿನ್ಯಾಸ:
**ಸುಮಾ ಸಾಗರ್**

# ದೇಶದ ಪ್ರಗತಿಯಲ್ಲಿ ಶಿಕ್ಷಣದ ಪಾತ್ರ ಮುಖ್ಯ



ಶ್ರೀದೇವಿ ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್, ಡಾ. ರಮಣ್ ಎಂ ಹುಲಿನಾಯ್ಕರ್, ಎಂ.ಎಸ್. ಪಾಟೀಲ್, ಬೆಂಗಳೂರಿನ ರಾಜ್ಯ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಎಲ್.ಎನ್. ಮುಕುಂದರಾಜ್, ಭಾರತ ಸೇನೆಯ ರೈಫಲ್ ಶೂಟಿಂಗ್ ತಂಡಕ್ಕೆ ಆಯ್ಕೆಯಾದ ರಾಷ್ಟ್ರಮಟ್ಟದ ಪದಕ ವಿಜೇತೆ ಹಾಗೂ ರೈಫಲ್ ಶೂಟಿಂಗ್ ಕುಮಾರಿ ಮಹಾಲಕ್ಷ್ಮೀ, ಡಾ. ಪಿ. ಲಾವಣ್ಯ, ಶ್ರೀಮತಿ ಅಂಬಿಕಾ ಎಂ. ಹುಲಿನಾಯ್ಕರ್, ಡಾ. ಎಂ.ಎಲ್. ಹರೇಂದ್ರಕುಮಾರ್, ಮತ್ತು ಡಾ. ನರೇಂದ್ರ ವಿಶ್ವನಾಥ್, ಮುಂತಾದವರು.

"ದೇಶದ ಭವಿಷ್ಯವನ್ನು ರೂಪಿಸುವ ನಾಡಿನ ಎಲ್ಲಾ ಮಕ್ಕಳು ಶಿಕ್ಷಣ ಪಡೆದು ವಿದ್ಯಾವಂತರಾಗಬೇಕು. ಜೊತೆಗೆ ಆರೋಗ್ಯವಂತರಾಗಿ, ಸದೃಢಕಾಯರಾಗಬೇಕು. ನಾವೆಲ್ಲರೂ ಸೇರಿ ದೇಶದ ಪ್ರಗತಿಗೆ ಶ್ರಮಿಸಬೇಕು. ಸಮಾನತೆಯನ್ನು ಕಾಪಾಡಿಕೊಳ್ಳಬೇಕು. ಆಗ ಜನರಲ್ಲಿ ಶಾಂತಿ ಮತ್ತು ನೆಮ್ಮದಿಗಳನ್ನು ಕಾಣಲು ಸಾಧ್ಯ. ನಮ್ಮ ಹಿರಿಯರು ತಂದುಕೊಟ್ಟ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದು ನಮ್ಮೆಲ್ಲರ ಆದ್ಯ ಕರ್ತವ್ಯ. ದೇಶದ ಪ್ರಗತಿಗೆ ಶ್ರಮಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಗಣರಾಜ್ಯೋತ್ಸವವು ಭಾರತದ ಒಂದು ಮಹತ್ವದ ಹಬ್ಬವಾಗಿದೆ. ಸುಮಾರು 250 ವರ್ಷಗಳ ಕಾಲ ಬ್ರಿಟಿಷರ ಆಳ್ವಿಕೆಗೊಳಗಾಗಿ ನಮ್ಮ ದೇಶ ಅನೇಕ ಕಷ್ಟ–ನಷ್ಟಗಳನ್ನು ಅನುಭವಿಸಿದೆ. ನಮ್ಮ ಹಿರಿಯರ ತ್ಯಾಗ, ಬಲಿದಾನಗಳ ಮೂಲಕ ನಾವು ಸ್ವಾತಂತ್ರ್ಯವನ್ನು ಪಡೆದಿದ್ದೇವೆ. ಸ್ವಾತಂತ್ರ್ಯ ಬಂದಾಗ ಮಹಿಳೆಯರ ಸಾಕ್ಷರತೆಯ ಪ್ರಮಾಣ ಶೇಕಡ 12ರಷ್ಟಿತ್ತು. ಇಂದು ದೇಶದ ಜನರ ಸಾಕ್ಷರತೆಯ ಪ್ರಮಾಣ ಶೇಕಡ 80ರಷ್ಟಿದೆ. ವಿಶ್ವದ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಭಾರತವು ಮೂರನೆಯ ಸ್ಥಾನದಲ್ಲಿದೆ" ಎಂದು ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್ ಅವರು ತಿಳಿಸಿದರು. ಶ್ರೀಯುತರು ಶ್ರೀದೇವಿ ಸಮೂಹ ವಿದ್ಯಾಸಂಸ್ಥೆಗಳ ವತಿಯಿಂದ ಜನವರಿ 26ರಂದು ಹಮ್ಮಿಕೊಂಡಿದ್ದ 77ನೇ ಗಣರಾಜ್ಯೋತ್ಸವದ ದಿನಾಚರಣೆಯ ಸಮಾರಂಭದಲ್ಲಿ ಮಾತನಾಡುತ್ತಿದ್ದರು.

ಕಾರ್ಯಕ್ರಮದಲ್ಲಿ ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ. ರಮಣ್ ಎಂ. ಹುಲಿನಾಯ್ಕರ್ ಅವರು ಸ್ವಾಗತ ಭಾಷಣ ಮಾಡಿ "ದೇಶದ ಸ್ವಾತಂತ್ರ್ಯಕ್ಕಾಗಿ ಶ್ರಮಿಸಿದ ಹಿರಿಯರೆಲ್ಲರನ್ನೂ ಗೌರವಿಸಬೇಕು. ಜನಪರ ಆಶಯವನ್ನು ಹೊಂದಿರುವ ಭಾರತದ ಸಂವಿಧಾನವೇ ದೇಶದ ಎಲ್ಲಾ ನಾಗರಿಕರ ಆಸ್ತಿಯಾಗಿದೆ. ನಮ್ಮ ಸಂವಿಧಾನದಲ್ಲಿ ನಮೂದಿಸಿರುವ ಹಕ್ಕು ಮತ್ತು ಕರ್ತವ್ಯದ ಹಿನ್ನೆಲೆಯಲ್ಲಿ ನಾವು ದೇಶಕ್ಕೆ ಏನು ಕೊಡುಗೆ ಕೊಡಬೇಕು ಎನ್ನುವುದನ್ನು ನೆನಪಿಸುವ ಸುದಿನ ಗಣರಾಜ್ಯೋತ್ಸವ" ಎಂದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಎಲ್.ಎನ್. ಮುಕುಂದರಾಜ್ ಅವರು ಮಾತನಾಡುತ್ತಾ "ದೇಶದಲ್ಲಿ ಅನೇಕ ರಾಷ್ಟ್ರೀಯ ಹಬ್ಬಗಳನ್ನು ಆಚರಣೆ ಮಾಡುತ್ತೇವೆ. ಅದರಲ್ಲಿ ಗಣರಾಜ್ಯೋತ್ಸವ ಮಹತ್ತ್ವವಾದ ಹಬ್ಬವಾಗಿದೆ. ಎಲ್ಲಾ ಜನರು ಸ್ನೇಹ, ಶಾಂತಿ, ಸೌಹಾರ್ದತೆಯನ್ನು ಮೈಗೂಡಿಸಿಕೊಂಡರೆ ದೇಶದ ಜನಜೀವನದಲ್ಲಿ ಅದ್ಭುತ ಮಾರ್ಪಾಡು ಮಾಡಲು ಸಾಧ್ಯವಿದೆ. ಡಾ. ಬಾಬು ರಾಜೇಂದ್ರಪ್ರಸಾದ್ ಮತ್ತು ಡಾ. ಬಿ.ಆರ್. ಅಂಬೇಡ್ಕರ್ ಅವರ ನೇತೃತ್ವದಲ್ಲಿ ಸಂವಿಧಾನ ಸಮಿತಿ ರಚಿಸಲಾಗಿತ್ತು. ಅವರು ಅಚ್ಚುಕಟ್ಟಾಗಿ ಕೆಲಸ ಮಾಡಿ ದೇಶದ ಬೆಳವಣಿಗೆ ಪೂರಕವಾದ ಸಂವಿಧಾನವನ್ನು ನಮಗೆ ಕೊಟ್ಟಿದ್ದಾರೆ. ಅದನ್ನು ನಾವು ಸದುಪಯೋಗಪಡಿಸಿಕೊಳ್ಳಬೇಕು. ಶ್ರೀದೇವಿ ಶಿಕ್ಷಣ ಸಂಸ್ಥೆಯೂ ಮುಂದಿನ ದಿನಗಳಲ್ಲಿ ವಿಶ್ವವಿದ್ಯಾನಿಲಯದ ಮಾನ್ಯತೆ ಪಡೆಯಲಿ" ಎಂದರು.

ಭಾರತ ಸೇನೆಯ ರೈಫಲ್ ಶೂಟಿಂಗ್ ತಂಡಕ್ಕೆ ಆಯ್ಕೆಯಾದ ರಾಷ್ಟ್ರಮಟ್ಟದ ಪದಕ ವಿಜೇತೆ ಹಾಗೂ ರೈಫಲ್ ಶೂಟಿಂಗ್ ಕುಮಾರಿ ಮಹಾಲಕ್ಷ್ಮೀ ಅವರು "ನನ್ನ ಸಹೋದರನ ಪ್ರೇರಣೆಯಿಂದ ಅತ್ಯುತ್ತಮ ಅಭ್ಯಾಸದಿಂದ ರಾಷ್ಟ್ರಮಟ್ಟದ ಪದಕಗಳಿಸಿದ್ದೇನೆ. ಕೋಚಿಂಗ್ ಅನಿಲ್ ಅವರು ನನ್ನ ಎಲ್ಲಾ ಸಾಧನೆಗೆ ಕಾರಣಕರ್ತರಾಗಿದ್ದಾರೆ" ಎಂದರು.

ಇದೇ ಸಂದರ್ಭದಲ್ಲಿ ಎಲ್.ಎನ್. ಮುಕುಂದರಾಜ್‌ರವರು ಹಾಗೂ ಕುಮಾರಿ ಮಹಾಲಕ್ಷ್ಮೀ ಅವರಿಗೆ ಶ್ರೀದೇವಿ ಸಮೂಹ ವಿದ್ಯಾಸಂಸ್ಥೆಗಳ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ವಿಜೇತರಾದ ತಂಡಕ್ಕೆ ಬಹುಮಾನವನ್ನು ವಿತರಿಸಲಾಯಿತು.

■ ವರದಿ: ಶೃತಿ ಬೆಳ್ಳಿಯಾರ್ ಹೆಚ್ ವಿ

# ಶ್ರೀದೇವಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯ ಇ.ಎನ್.ಟಿ ವಿಭಾಗದ ವೈದ್ಯರ ಸಾಧನೆ

■ **ಡಾ. ಅಶ್ವಿನಿ ದೊಡ್ಡಮನಿ**
**ಸಹಾಯಕ ಪ್ರಾಧ್ಯಾಪಕರು, ಇ.ಎನ್.ಟಿ. ವಿಭಾಗ**
**ಶ್ರೀದೇವಿ ವೈದ್ಯಕೀಯ ಕಾಲೇಜು**



ಶ್ರೀದೇವಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಆಸ್ಪತ್ರೆಯ 'ಕಿವಿ, ಮೂಗು ಮತ್ತು ಗಂಟಲು ಚಿಕಿತ್ಸಾ ವಿಭಾಗ' ಮತ್ತು 'ಗ್ರಂಥಿಚಿಕಿತ್ಸಾ ವಿಭಾಗಗಳ ಸಂಯೋಜಿತ ಪ್ರಯತ್ನವು ಇತ್ತೀಚೆಗೆ ಉಸಿರಾಟದ ಸಮಸ್ಯೆಯಿಂದ ಪ್ರಾಣಾಪಾಯದ ಅಂಚಿನಲ್ಲಿದ್ದ ವ್ಯಕ್ತಿಯನ್ನು ಯಶಸ್ವಿಯಾಗಿ ಆ ಸ್ಥಿತಿಯಿಂದ ಪಾರುಮಾಡಿದೆ. ಈ ಘಟನೆ ಆಕಸ್ಮಿಕವಾಗಿ ಉಂಟಾಗುವ ಕುತ್ತಿಗೆಯ ಊತ ಮತ್ತು ಉಸಿರಾಟದ ತೊಂದರೆಗಳನ್ನು ಸಮರ್ಥವಾಗಿ ನಿಭಾಯಿಸುವುದರಲ್ಲಿ ತೆಗೆದುಕೊಳ್ಳಬೇಕಾದ ತ್ವರಿತ ನಿರ್ಣಯ, ವೈದ್ಯರ ತಂಡದ ಸಮನ್ವಯದ ಕಾರ್ಯನಿರ್ವಹಣೆ ಮತ್ತು ಅಗತ್ಯವಾದ ಶಸ್ತ್ರಚಿಕಿತ್ಸೆಯ ಮಹತ್ತ್ವವನ್ನು ತೋರಿಸಿತು.

45 ವರ್ಷದ ರೈತರೊಬ್ಬರಿಗೆ ಅನಿರೀಕ್ಷಿತವಾಗಿ ಕುತ್ತಿಗೆಯ ಎಡ ಬದಿಯಲ್ಲಿ ಆದ ಊತದಿಂದಾಗಿ ಉಸಿರಾಡಲು ಮತ್ತು ಉಗುಳು ನುಂಗಲು ಕೂಡ ತೊಂದರೆಯಾಗಿತ್ತು ಮತ್ತು ರೋಗದ ಲಕ್ಷಣಗಳು ಒಂದೇ ದಿನದಲ್ಲಿ ಗಂಭೀರವಾದವು ಮತ್ತು ಅಂದು ರಾತ್ರಿಯೇ ಉಸಿರಾಟದ ತೊಂದರೆ ತೀವ್ರವಾಗಿ, ಅವರ ಜೀವಕ್ಕೇ ಅಪಾಯವುಂಟಾಗಿತ್ತು.

ಮೇಲುನೋಟಕ್ಕೆ ಈ ರೋಗಿಯಲ್ಲಿ ಈ ಸಮಸ್ಯೆ ಹಠಾತ್ ಕಾಣಿಸಿಕೊಂಡಂತಿದ್ದರೂ, ರೋಗಿಯ ಇತಿಹಾಸವನ್ನು ಗಮನಿಸಿದಾಗ ಕಳೆದ ಒಂದು ವರ್ಷದಲ್ಲಿ ಇಂತಹುದೇ ಸಮಸ್ಯೆ ಆತನಲ್ಲಿ ಹಲವು ಬಾರಿ ಉಂಟಾಗಿತ್ತು ಮತ್ತು ಸ್ಥಳೀಯ ವೈದ್ಯಕೀಯ ಕೇಂದ್ರದಲ್ಲಿ ನೀಡಿದ ಔಷಧಿಗಳಿಂದ ಊತ ಕಡಿಮೆಯಾಗಿತ್ತು ಎಂಬುದು ಬೆಳಕಿಗೆ ಬಂದಿತು. ಆದರೆ ಈ ಬಾರಿ ಸ್ಥಿತಿ ಶೀಘ್ರವಾಗಿ ಗಂಭೀರವಾದ ಹಂತವನ್ನು ತಲುಪಿದ್ದ ಕಾರಣ ಅವರು ತುರ್ತು ಚಿಕಿತ್ಸೆಗಾಗಿ ಶ್ರೀದೇವಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆಗೆ ಬಂದರು. ಈ ಸಂದರ್ಭದಲ್ಲಿ ಗಮನಿಸಿದ ಮತ್ತೊಂದು ಅಂಶವೆಂದರೆ, ಅವರಿಗೆ ಇತ್ತೀಚಿಗೆ ಮಧುಮೇಹದ ಸಮಸ್ಯೆಯೂ ಬಂದಿದ್ದು, ಅದು ರೋಗವು ಈ ಮಟ್ಟಕ್ಕೆ ಉಲ್ಬಣವಾಗುವುದಕ್ಕೆ ಕಾರಣವಾಯಿತೆಂಬ ಅಂಶವು ವೈದ್ಯರ ಗಮನಕ್ಕೆ ಬಂದಿತ್ತು.

ಹಿಂದೆ ಉಂಟಾಗಿದ್ದ ಮತ್ತು ಈಗ ಕಂಡುಬಂದ ಲಕ್ಷಣಗಳನ್ನು ಆಧರಿಸಿ, ಆತನ ಕುತ್ತಿಗೆಯಲ್ಲಿನ ಅಪಾಯಕಾರಿಯಾದ ಬಾವು, ಮತ್ತು ತಲೆ ಹಾಗೂ ಕುತ್ತಿಗೆಯ ಬಳಿ ಸಂಭವನೀಯ ಎರಡನೆಯ ಹಂತದ ಕ್ಯಾನ್ಸರ್ ಹಾಗೂ ಧ್ವನಿಪೆಟ್ಟಿಗೆಯಲ್ಲಿ ಆಗಿರಬಹುದಾದ (laryngocele) ಸಮಸ್ಯೆಗಳ ಸಾಧ್ಯತೆಯ ಬಗೆಗೆ ಪರಿಣತರ ತಂಡವು ಸುದೀರ್ಘವಾಗಿ ಚರ್ಚಿಸಿತು.

ದೈಹಿಕ ಪರಿಶೀಲನೆ ಮಾಡಿದಾಗ ಕುತ್ತಿಗೆಯ ಎಡಭಾಗದ ಮುಂದೆ 6×3 ಸೆಂ.ಮೀ ಗಾತ್ರದ, ಗಟ್ಟಿಯಾದ ಹಾಗೂ ಒತ್ತಿದರೂ ಸಂಕುಚಿಸದ ಊತವಿದ್ದದ್ದು ಕಂಡುಬಂದಿತು. ಕೆಮ್ಮಿದಾಗ ಈ ಊತದ ಗಾತ್ರ ಹೆಚ್ಚಾಗುವುದು, ಲ್ಯಾರಿಂಗೊಸಿಲ್ ಸಮಸ್ಯೆಯ ಒಂದು ವಿಶಿಷ್ಟ ಲಕ್ಷಣ. ಪರೀಕ್ಷೆಗಳ ಭಾಗವಾಗಿ ವಿಶೇಷವಾಗಿ ಕುತ್ತಿಗೆಯ CT ಸ್ಕ್ಯಾನಿನ ಇಮೇಜಿಂಗ್‌ನಲ್ಲಿ ರೋಗಿಯ ಕಂಠದಲ್ಲಿರುವ ಸಣ್ಣಚೀಲದಲ್ಲಿ ಗಾಳಿಯು ಹೆಚ್ಚಿನ ಪ್ರಮಾಣದಲ್ಲಿ ತುಂಬಿರುವುದು ಹಾಗೂ ಈ ಊತವಿರುವ ಭಾಗದಲ್ಲಿ ಅನ್ಯವಸ್ತುವಿರುವುದೂ ಮತ್ತು ಆ ಭಾಗಕ್ಕೆ ಸೋಂಕು ತಗುಲಿರುವುದೂ ತಿಳಿದುಬಂದವು. ಈ ಪ್ರಕ್ರಿಯೆಯು ನಮ್ಮ ತಂಡವು ತೆಗೆದುಕೊಳ್ಳಬಹುದಾದ ನಿರ್ಣಯದಲ್ಲಿ ಮಹತ್ತ್ವದ ಪಾತ್ರವನ್ನು ವಹಿಸಿತು. ಆತಂಕಕಾರಿವಾಗಿದ್ದ ಸಂಗತಿ ಎಂದರೆ, ಈ ಊತದೊಳಗೆ ಸೋಂಕು ಉಂಟಾಗಿದ್ದು, ಆಹಾರವನ್ನು ನುಂಗುವದಕ್ಕೆ, ಸುಗಮ







ಉಸಿರಾಟಕ್ಕೆ ತಡೆಯಾಗುತ್ತಿತ್ತು.

ಸ್ಥಿತಿಯ ತುರ್ತನ್ನು ಮನಗಂಡ ENT ವಿಭಾಗದ ಗ್ರಂಥಿ ಶಸ್ತ್ರಚಿಕಿತ್ಸಕರಾದ ಡಾ. ದಯಾನಂದ್, ಡಾ. ಅಶ್ವಿನಿ ಮತ್ತು ಡಾ. ಸೌಮ್ಯ ಅವರು ರೋಗಿಯ ಉಸಿರಾಟದಲ್ಲಿದ್ದ ಸಮಸ್ಯೆಯನ್ನು ಆದ್ಯತೆಯ ಮೇಲೆ ನಿರ್ವಹಿಸಲು ಟ್ರೇಕಿಯೊಸ್ಟಮಿ ವಿಧಾನದಲ್ಲಿ ಒಂದು ಸಣ್ಣರಂಧ್ರವನ್ನು ಮಾಡಿ ಅಲ್ಲಿ ಒಂದು ಸಣ್ಣನಾಳವನ್ನು ಅಳವಡಿಸಿದರು. ಶ್ರೀದೇವಿ ಆಸ್ಪತ್ರೆಯ ಅರಿವಳಿಕೆಯ ವಿಭಾಗದವರ ಉತ್ತಮ ಸಹಕಾರದಿಂದ ಶ್ವಾಸೋಚ್ಛ್ವಾಸವು ಸುಗಮವಾಗಿ ನಡೆಯುವಂತೆ ಮಾಡಿ ಸಂಭವಿಸಬಹುದಾಗಿದ್ದ ವೈದ್ಯಕೀಯ ಜಟಿಲತೆಯನ್ನು ತಪ್ಪಿಸಿದರು. ಈ ವೈದ್ಯರು ತೆಗೆದುಕೊಂಡ ಸಮಯೋಚಿತ ನಿರ್ಧಾರಗಳು ರೋಗಿಯ ಪರಿಸ್ಥಿತಿಯನ್ನು ಸುಧಾರಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದವು.

ಇದರಿಂದ ಆ ಭಾಗದಲ್ಲಿ ಉಂಟಾಗಿದ್ದ ಸೋಂಕು ನಿವಾರಣೆಯಾಗಿ ಮುಂದಿನ ಶಸ್ತ್ರಚಿಕಿತ್ಸೆಗೆ ಹಾದಿ ಸುಗಮವಾಯಿತು. ಆ ಹಂತದಲ್ಲಿ ರೋಗಿಯನ್ನು ಸಂಪೂರ್ಣ ಅರಿವಳಿಕೆಗೆ ಒಳಪಡಿಸಿ, ಸಮಸ್ಯೆಗೆ ಒಳಗಾಗಿದ್ದ ಲ್ಯಾರಿಂಗೊಸಿಲನ್ನು ಸಂಪೂರ್ಣವಾಗಿ ಛೇದಿಸಿ ಯಶಸ್ವಿಯಾಗಿ ಹೊರತೆಗೆದರು. ಪರಿಸ್ಥಿತಿಯು ನಿರಪಾಯ ಸ್ಥಿತಿಗೆ ಬಂದ ಅನಂತರ ಶ್ವಾಸನಾಳದ ಬಳಿ ಅಳವಡಿಸಿದ್ದ ಕೃತಕ ನಾಳವನ್ನು ತೆಗೆದುಹಾಕಿದರು. ರೋಗಿಯು ಸಂಪೂರ್ಣವಾಗಿ ಗುಣಮುಖನಾದ ಅನಂತರ, ಆತನನ್ನು ಆಸ್ಪತ್ರೆಯಿಂದ ಮನೆಗೆ ಕಳುಹಿಸಲಾಯಿತು.

ಇಪ್ಪತ್ತೈದು ಲಕ್ಷ ಜನರಲ್ಲಿ ಒಬ್ಬರಲ್ಲಿ ಕಂಡು ಬರಬಹುದಾದ ಈ ಸಮಸ್ಯೆಯು ಪುರುಷರಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಇದು ಉದ್ಭವಿಸಿದ ಅನಂತರ ಬಹುಕಾಲ ಇದರ ಲಕ್ಷಣಗಳು ಕಂಡು ಬರದಿರಬಹುದು. ಆದರೆ ತಗುಲಿದ ಸೋಂಕು ತೀವ್ರವಾದಾಗ ಇದ್ದಕ್ಕಿದ್ದ ಹಾಗೆ ಊತವು ಹೆಚ್ಚಾಗಿ, ಉಸಿರಾಟಕ್ಕೆ ತೊಂದರೆಯನ್ನು ಒಡ್ಡುತ್ತದೆ. ತತ್ಪರಿಣಾಮವಾಗಿ ರೋಗಿಗೆ ಪ್ರಾಣಾಪಾಯವೂ ಉಂಟಾಗುತ್ತದೆ.

ಈ ಪ್ರಕರಣದಲ್ಲಿ ಭಾಗವಹಿಸಿದ್ದ ವೈದ್ಯರ ಸಲಹೆಯ ಪ್ರಕಾರ, ಮತ್ತೆ ಮತ್ತೆ ಕಾಣಿಸಿಕೊಳ್ಳುವ ಅಥವಾ ತ್ವರಿತವಾಗಿ ದೊಡ್ಡದಾಗುತ್ತಿರುವ ಕುತ್ತಿಗೆಯ ಊತಗಳನ್ನು ಎಂದಿಗೂ ನಿರ್ಲಕ್ಷಿಸಬಾರದು. ಸಮಸ್ಯೆಯನ್ನು ಶೀಘ್ರವಾಗಿ ಗುರುತಿಸಿ ಚಿಕಿತ್ಸೆಯನ್ನು ನೀಡಿದರೆ ರೋಗಿಯ ಪ್ರಾಣವನ್ನು ಉಳಿಸಬಹುದು ಎಂಬುದು ಶ್ರೀದೇವಿ ಆಸ್ಪತ್ರೆಯ ಶಸ್ತ್ರಚಿಕಿತ್ಸಾ ತಜ್ಞರ ಅಭಿಪ್ರಾಯವಾಗಿದೆ ಮತ್ತು ಪ್ರಸ್ತುತ ಪ್ರಕರಣದಲ್ಲಿ ಭಾಗವಹಿಸಿದ್ದ ವಿವಿಧ ವೈದ್ಯಕೀಯ ವಿಭಾಗಳ ಸಮನ್ವಯದಿಂದ ಕೂಡಿದ ಕ್ರಮದಿಂದ ಸಾವಿನ ಹೊಸ್ತಿಲಿನಲ್ಲಿದ್ದ ವ್ಯಕ್ತಿಯನ್ನು ಯಶಸ್ವಿಯಾಗಿ ಅಂತಹ ಪರಿಸ್ಥಿತಿಯಿಂದ ಹೊರತಂದದ್ದು ತೃಪ್ತಿದಾಯಕವಾಗಿತ್ತು ಎಂದು ತಂಡದ ವೈದ್ಯರು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

■ ಕನ್ನಡಕ್ಕೆ: ವಿ.ಕೃಷ್ಣ

# ಭಾರತ ಫಾರ್ಮಸಿ ಆಫ್ ದ ವರ್ಲ್ಡ್



ಔಷಧ ತಯಾರಿಕೆ ಮತ್ತು ಆರೋಗ್ಯಸೇವಾ ಕ್ಷೇತ್ರವು ಜಾಗತಿಕವಾಗಿ ವೇಗವಾಗಿ ವಿಸ್ತಾರವಾಗುತ್ತಿರುವ ಪ್ರಮುಖ ಉದ್ಯಮಗಳಲ್ಲಿ ಒಂದಾಗಿದೆ. ಭಾರತವು ಪ್ರಪಂಚದಲ್ಲಿ ಅಗ್ರ ಔಷಧ ಉತ್ಪಾದಕ ರಾಷ್ಟ್ರಗಳಲ್ಲಿ ಸ್ಥಾನ ಪಡೆದಿದ್ದು, 'ಫಾರ್ಮಸಿ ಆಫ್ ದ ವರ್ಲ್ಡ್' ಎಂದೇ ಗುರುತಿಸಿಕೊಂಡಿದೆ. ಈ ರಾಷ್ಟ್ರೀಯ ಬೆಳವಣಿಗೆಯಲ್ಲಿ ಕರ್ನಾಟಕವೂ ಮಹತ್ವದ ಪಾತ್ರವಹಿಸಿದ್ದು, ಬೆಂಗಳೂರನ್ನು ಕೇಂದ್ರವಾಗಿಸಿಕೊಂಡು ಬಯೋಟೆಕ್ ಸಂಶೋಧನೆ, ಉತ್ಪಾದನೆ ಹಾಗೂ ನಿಯಂತ್ರಣ ವಲಯಗಳಲ್ಲಿ ಅಪಾರ ಅವಕಾಶ ರೂಪುಗೊಂಡಿವೆ. ಸಂಶೋಧನೆ ಮತ್ತು ಅಭಿವೃದ್ಧಿ, ಕ್ಲಿನಿಕಲ್ ಟ್ರಯಲ್ಸ್, ಗುಣಮಟ್ಟ ನಿಯಂತ್ರಣ, ಉದ್ಯಮ ನಿಯಂತ್ರಕ ವ್ಯವಸ್ಥೆ ಹೀಗೆ ಹಲವು ಕ್ಷೇತ್ರಗಳಲ್ಲಿ ಫಾರ್ಮಾ ಪದವೀಧರರಿಗೆ ಉದ್ಯೋಗ ಮತ್ತು ಉದ್ಯಮಗಳ ಅವಕಾಶಗಳು ಲಭ್ಯವಿವೆ. ಔಷಧ ಉತ್ಪಾದನೆಯಲ್ಲಿ ಭಾರತ ಜಾಗತಿಕವಾಗಿ ಮೂರನೇ ಸ್ಥಾನದಲ್ಲಿದೆ. ನಮ್ಮಲ್ಲಿನ ಔಷಧಗಳು 200ಕ್ಕೂ ಹೆಚ್ಚು ದೇಶಗಳಿಗೆ ರಫ್ತು ಮಾಡುತ್ತಿದೆ. ಅಮೆರಿಕ, ಬೆಲ್ಜಿಯಂ, ದಕ್ಷಿಣ ಆಫ್ರಿಕಾ, ಬ್ರಿಟನ್ ಮತ್ತು ಬ್ರೆಜಿಲ್ ಪ್ರಮುಖ ಆಮದುಮಾಡಿಕೊಳ್ಳುವ ದೇಶಗಳಾಗಿವೆ. ಔಷಧ ಉದ್ಯಮವನ್ನು ಉತ್ತೇಜಿಸಿ, ಹೂಡಿಕೆ ಹೆಚ್ಚಿಸಲು ಭಾರತ ಸರ್ಕಾರ ಹಲವು ಉಪಕ್ರಮಗಳನ್ನು ಜಾರಿಗೆ ತಂದಿದೆ. ಇದೊಂದು ಸಾಗರದಷ್ಟು ಆಳವಾದ ಕ್ಷೇತ್ರವಾಗಿದ್ದು ಇದರಲ್ಲಿ ಬಂಡವಾಳ ಹೂಡಿಕೆ. ಉದ್ಯೋಗಾವಕಾಶ ಹೇರಳವಾಗಿದೆ. ಔಷಧ ವಿಜ್ಞಾನ ಕೋರ್ಸ್‌ಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ. ದೇಶಾದ್ಯಂತ ಐದು ಸಾವಿರಕ್ಕೂ ಹೆಚ್ಚು ಫಾರ್ಮಸಿ ಕಾಲೇಜುಗಳಿವೆ. ಕರ್ನಾಟಕದಲ್ಲಿ 150 ಪದವಿ ಕಾಲೇಜುಗಳು, 300ಕ್ಕೂ ಹೆಚ್ಚು ಡಿಪ್ಲೋಮಾ ಕಾಲೇಜುಗಳು 50ಕ್ಕೂ ಹೆಚ್ಚು ಪಿ.ಜಿ. ಕಾಲೇಜುಗಳು ಕಾರ್ಯವನ್ನು ನಿರ್ವಹಿಸುತ್ತಿವೆ. ಶ್ರೀದೇವಿ ಕಾಲೇಜಿನಲ್ಲಿ ಬಿ ಫಾರ್ಮ, ಫಾರ್ಮ ಡಿ ಎಂಬ ಎರಡು ಪದವಿ ಕೋರ್ಸ್‌ಗಳು, ಮೂರು ಸ್ನಾತಕೋತ್ತರ ಕೋರ್ಸ್ ಲಭ್ಯವಿದೆ. ಪದವಿ ಕೋರ್ಸ್ ಅವಧಿ ಆರು ವರ್ಷ. ಪಿ.ಜಿ. ಕೋರ್ಸ್ ಅವಧಿ ಎರಡು ವರ್ಷ. ಕರ್ನಾಟಕದ ವಾರ್ಷಿಕ ಔಷಧ ವಹಿವಾಟು 12,500 ಕೋಟಿ ರೂ.ಗಳಷ್ಟಿದೆ. ಫೆಬ್ರವರಿ 7ರಂದು ತುಮಕೂರಿನ ಶ್ರೀದೇವಿ ಔಷಧವಿಜ್ಞಾನ ಕಾಲೇಜಿನ ಪದವಿ ಪ್ರದಾನ ಸಮಾರಂಭ ಹಾಗೂ ಹೊಸ ಕೋರ್ಸ್‌ಗಳ ಉದ್ಘಾಟನಾ ಸಮಾರಂಭ ಜರುಗಿತು.

ಫಾರ್ಮಾ ವಲಯದ ಭವಿಷ್ಯದ ದೃಷ್ಟಿಕೋನಗಳ ಬಗೆಗೆ ಹೊಸದಾಗಿ ಫಾರ್ಮಸಿ ಪದವಿ ಪಡೆದ ವಿದ್ಯಾರ್ಥಿಗಳು ಪೋಷಕರು ಮತ್ತು ಕಾಲೇಜಿನ ಸಹಕಾರ, ಮುಂದಿನ ಭವಿಷ್ಯದ ಕನಸುಗಳ ಬಗ್ಗೆ, ಪತ್ರಿಕೆಯೊಂದಿಗೆ ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ.

ಘಟಿಕೋತ್ಸವ ಸಮಾರಂಭದಲ್ಲಿ ಭಾಗಿಯಾಗಿದ್ದ ಮಂಗಳೂರಿನ ಪಿ.ಎ. ಫಾರ್ಮಸಿ ಕಾಲೇಜಿನ ಪ್ರಾಂಶುಪಾಲ ಡಾ. ಸಲೀಮುಲ್ಲಾಖಾನ್ ಅವರು "ಜಗತ್ತಿನ ಆರೋಗ್ಯ, ಭವಿಷ್ಯ ಔಷಧ ವಿಜ್ಞಾನದ ಮೇಲೆ ಅವಲಂಬಿತವಾಗಿದೆ ಎಂದು ಹೇಳಿ, ಕೌಶಲ ಮತ್ತು ಜ್ಞಾನ ಎರಡು ಒಂದೇ ನಾಣ್ಯದ ಎರಡು ಮುಖಗಳೇ ಹೊರತು ಬೇರೆಬೇರೆಯಲ್ಲ" ಎಂದರು.

ಹಿಮಾಲಯ ಔಷಧ ಕಂಪನಿಯ ಪ್ರಧಾನ ವಿಜ್ಞಾನಿ ಡಾ. ಎನ್.ಎಸ್. ಪ್ರಕಾಶ್ ಅವರು "ಪದವಿ ಮುಗಿದ ತಕ್ಷಣ ಎಲ್ಲವೂ ಮುಗಿದು ಹೋಯಿತು ಎಂಬ ಭಾವನೆ ಸರಿಯಲ್ಲ. ಇಂದಿನಿಂದ ನಿಮ್ಮ ಜೀವನದ ಪರೀಕ್ಷೆ ಆರಂಭವಾಗಲಿದೆ ಮತ್ತು ನಿಮ್ಮ ಪಾಲಿಗೆ ಹೇರಳ ಅವಕಾಶವಿದೆ. ಅದನ್ನು ಸದುಪಯೋಗಪಡಿಸಿಕೊಳ್ಳುವ ಅವಕಾಶವೂ ನಿಮ್ಮಲ್ಲೇ ಇದೆ" ಎಂದರು.

ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾಗಿರುವ ಡಾ. ಎಂ. ಆರ್. ಹುಲಿನಾಯ್ಕರ್ ಔಷಧ "ವಿಜ್ಞಾನ ಬಹಳ ವೇಗವಾಗಿ ಬೆಳೆಯುತ್ತಿದೆ. ಹಿಂದೆ ಹೃದಯಸಂಬಂಧಿ ಕಾಯಿಲೆಗಳಿಗೆ ಕೇವಲ ನಾಲ್ಕು ಅಥವಾ ಐದು ಔಷಧಿಗಳು ಲಭ್ಯವಿರುತ್ತಿದ್ದವು. ಆದರೆ, ಈಗ ಪರಿಸ್ಥಿತಿ ಬದಲಾಗಿದೆ. 500ಕ್ಕೂ ಹೆಚ್ಚು ಔಷಧ ಮಾತ್ರೆಗಳು ಈಗ ದೊರೆಯುತ್ತಿವೆ" ಎಂದರು. ಈ ಸಮಾರಂಭದಲ್ಲಿ 75 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

▪ **ವರದಿ: ಕೆ.ಎಸ್.ರಾಜಮನ್ನಾರು, ಶೃತಿ ಬೆಳ್ಳಿಯಾರ್ ಹೆಚ್.ವಿ.**

## ಶ್ರೀದೇವಿ ಫಾರ್ಮಸಿ ವಿದ್ಯಾರ್ಥಿನಿ ಕುಮಾರಿ ರುಚಿತಾ - ಪ್ರಥಮ ರ್‍ಯಾಂಕ್



ಶ್ರೀದೇವಿ ಫಾರ್ಮಸಿ ಕಾಲೇಜಿನಲ್ಲಿ ನಾಲ್ಕು ವರ್ಷಗಳಿಂದ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿನಿ ರುಚಿತಾ ಅವರು ಇಂದು ನಡೆದ ಪದವಿ ಪ್ರದಾನ ಸಮಾರಂಭದಲ್ಲಿ ತಮ್ಮ ಅನುಭವಗಳನ್ನು ಹಂಚಿಕೊಂಡರು: "ನಾಲ್ಕು ವರ್ಷದ ನನ್ನ ವಿದ್ಯಾಭ್ಯಾಸದ ಪಯಣ ಅದ್ಭುತವಾಗಿತ್ತು. ಪ್ರಥಮ ವರ್ಷದಿಂದ ಅಂತಿಮ ವರ್ಷದವರೆಗೆ ನಾನು ಕಾಲೇಜಿನ ಟಾಪರ್ ಆಗಿ ಮುಂದುವರಿದು, ಈಗ ಅಕಾಡೆಮಿಕ್ ಎಕ್ಸಲೆನ್ಸ್ ವಿಭಾಗದಲ್ಲಿ ಪ್ರಥಮ ರ್‍ಯಾಂಕ್ ಪಡೆದಿರುವುದು ನನಗೆ ತುಂಬ ಸಂತೋಷ ತಂದಿದೆ. ನಮ್ಮ ಕಾಲೇಜಿನ ವಸತಿ ನಿಲಯದ ಉತ್ತಮ ಸೌಲಭ್ಯಗಳು, ರುಚಿಯಾದ ಆಹಾರ ವ್ಯವಸ್ಥೆ ಹಾಗೂ ಸುಂದರವಾದ ಹಸಿರು ಪರಿಸರವು ನನ್ನ ವಿದ್ಯಾಭ್ಯಾಸಕ್ಕೆ ಅನುಕೂಲಕರವಾಗಿತ್ತು. ಉತ್ತಮ ಶಿಕ್ಷಕರು ಹಾಗೂ ಮಾರ್ಗದರ್ಶಕ ಮೆಂಟರ್‌ಗಳ ಸಹಕಾರದಿಂದ ನನ್ನಲ್ಲಿ ಆತ್ಮವಿಶ್ವಾಸ ಹೆಚ್ಚಾಯಿತು. ನನ್ನ ಸಾಧನೆಗೆ ನನ್ನ ತಂದೆ–ತಾಯಿ ತುಂಬ ಸಂತೋಷಪಟ್ಟಿದ್ದಾರೆ. ಉನ್ನತ ವಿದ್ಯಾಭ್ಯಾಸಕ್ಕಾಗಿ ಮಾಸ್ಟರ್ಸ್ ಮಾಡುವ ಜೊತೆಗೆ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯುವ ಉದ್ದೇಶವಿದೆ".

## ಅಕಾಡೆಮಿಕ್ ಎಕ್ಸ್‌ಲೆನ್ಸಿ ಪುರಸ್ಕಾರ ಪಡೆದ ವಿದ್ಯಾರ್ಥಿ ಮಹಮ್ಮದ್ ಮುಸೈಬ್



"ಶ್ರೀದೇವಿ ಔಷಧ ವಿಜ್ಞಾನ ಸಂಸ್ಥೆಯಲ್ಲಿ ಗುಣಮಟ್ಟದ ವಿದ್ಯಾಭ್ಯಾಸ ಹಾಗೂ ವಿಶಾಲವಾದ ಶೈಕ್ಷಣಿಕ ವಾತಾವರಣ ಲಭ್ಯವಿದೆ. 2021ರಲ್ಲಿ ಔಷಧ ವಿಜ್ಞಾನ ಅಧ್ಯಯನಕ್ಕಾಗಿ ಕಾಲೇಜಿಗೆ ಸೇರ್ಪಡೆಯಾದಾಗ ಆರಂಭದಲ್ಲಿ ಸ್ವಲ್ಪ ಆತಂಕವಿತ್ತು. ಆದರೆ ನಂತರ ಕಾಲೇಜಿನಲ್ಲಿ ಹೊಸ ಪ್ರಿನ್ಸಿಪಲ್ ನೇಮಕವಾದ ಬಳಿಕ ಉತ್ತಮ ಬೋಧಕವೃಂದ, ಸುಧಾರಿತ ಪ್ರಾಯೋಗಿಕ ಸೌಲಭ್ಯಗಳು ಮತ್ತು ಆಧುನಿಕ ಸಾಧನಗಳು ದೊರೆತವು. ಬೋಧನೆಯ ಗುಣಮಟ್ಟ ಮತ್ತಷ್ಟು ಉತ್ತಮಗೊಂಡಿತು. ಬಿ.ಫಾರ್ಮ್ ಅಧ್ಯಯನದ ವೇಳೆ ಸಮಾಜಸೇವೆ, ಜವಾಬ್ದಾರಿ ಹಾಗೂ ಭವಿಷ್ಯದ ಗುರಿಗಳನ್ನು ಕುರಿತು ಹೆಚ್ಚಿನ ಆಸಕ್ತಿ ಬೆಳೆದಿದೆ. ಪರೀಕ್ಷಾ ಅವಧಿಯಲ್ಲಿ ಪ್ರತಿದಿನ 14 ರಿಂದ 16 ಗಂಟೆಗಳವರೆಗೆ ಅಧ್ಯಯನ ಮಾಡಿದ ಕಾರಣ ಉತ್ತಮ ಸಾಧನೆ ಮಾಡಲು ಸಾಧ್ಯವಾಯಿತು. ನನ್ನ ಪರಿಶ್ರಮವನ್ನು ಶಿಕ್ಷಕರು ಹಾಗೂ ಸ್ನೇಹಿತರು ಗುರುತಿಸಿದ್ದಾರೆ. ಅದು ನನಗೆ ಸಂತೋಷ ತಂದಿದೆ". ಎಂದು ಮಹಮ್ಮದ್ ಮುಸೈಬ್ ಹೇಳಿದರು.

# ಬೆಂಗಳೂರಿನ ಹೊರಗೆ ಐಟಿ ಉದ್ಯಮದ ಭವಿಷ್ಯ

▶▶ ಮೊದಲನೇ ಪುಟದಿಂದ

### ಸ್ಟಾರ್ಟ್‌ಅಪ್ ಪರಿಸರ: ಕೇವಲ ಕಟ್ಟಡವಲ್ಲ, ಸಂಪೂರ್ಣ ವ್ಯವಸ್ಥೆ

ಸ್ಟಾರ್ಟ್‌ಅಪ್‌ಗಳು ಬೆಳೆಯಲು ಕೇವಲ ಪ್ರತಿಭೆ ಮತ್ತು ಆಲೋಚನೆ ಸಾಕಾಗುವುದಿಲ್ಲ. ಅವು ಬೆಳೆದು ಸಂಸ್ಥೆಗಳಾಗಿ ರೂಪುಗೊಳ್ಳಲು ಒಂದು ಸಂರಚಿತ ಪರಿಸರ ಅಗತ್ಯ. ಈ ಪರಿಸರದಲ್ಲಿ ಐಟಿ ಪಾರ್ಕ್‌ಗಳು, ಇಂಕ್ಯೂಬೇಷನ್ ಕೇಂದ್ರಗಳು, ಶೇರ್‌ಡ್ ವರ್ಕ್‌ಸ್ಪೇಸ್‌ಗಳು ಮತ್ತು ಮೆಂಟರಿಂಗ್ ವ್ಯವಸ್ಥೆಗಳು ಪರಸ್ಪರ ಪೂರಕವಾಗಿ ಕಾರ್ಯನಿರ್ವಹಿಸಬೇಕು.

ಮೈಸೂರು ಅಥವಾ ಹುಬ್ಬಳ್ಳಿ–ಧಾರವಾಡದಂತಹ ನಗರಗಳಲ್ಲಿ ಐಟಿ ಪಾರ್ಕ್ ಮತ್ತು ಇಂಕ್ಯೂಬೇಷನ್ ವ್ಯವಸ್ಥೆಗಳು ಸಣ್ಣ ಕಂಪನಿಗಳಿಗೆ ಜೊತೆಜೊತೆಯಾಗಿ ಕಾರ್ಯನಿರ್ವಹಿಸುತ್ತಿರುವ ಉದಾಹರಣೆಗಳಿವೆ. ತುಮಕೂರಿನಲ್ಲಿ ಇಂತಹ ಸಮಗ್ರ ವ್ಯವಸ್ಥೆಯ ಕೊರತೆಯು ಅನೇಕ ಐಟಿ ಕಂಪನಿಗಳು ಮತ್ತು ಸ್ಟಾರ್ಟ್–ಅಪ್‌ಗಳು ಇಲ್ಲಿಗೆ ಬರುವುದಕ್ಕೆ ಹಿಂಜರಿಯುವಂತೆ ಮಾಡುತ್ತಿವೆ.

### ಎಂಟು ಎಂಜಿನಿಯರಿಂಗ್ ಕಾಲೇಜುಗಳು: ನವೋದ್ಯಮದ ನಿಜವಾದ ಚಾಲಕಶಕ್ತಿ

ತುಮಕೂರಿನ ಎಂಜಿನಿಯರಿಂಗ್ ಕಾಲೇಜುಗಳು ಕೇವಲ ಪದವಿ ನೀಡುವ ಕೇಂದ್ರಗಳಲ್ಲ. ಅವು ನವೋದ್ಯಮದ ಬೀಜಭೂಮಿ. ಪ್ರತಿವರ್ಷ ಇಲ್ಲಿ ನಡೆಯುವ ವಿದ್ಯಾರ್ಥಿ ಪ್ರಾಜೆಕ್ಟ್‌ಗಳು, AI ಆಧಾರಿತ ಆರೋಗ್ಯ ಪರಿಹಾರಗಳು, ಕೃಷಿ ತಂತ್ರಜ್ಞಾನ, ಕೈಗಾರಿಕಾ ಸ್ವಯಂಚಾಲಿತ ವ್ಯವಸ್ಥೆಗಳು – ಇವು ಸರಿಯಾದ ಬೆಂಬಲ ದೊರೆತರೆ ಸ್ಟಾರ್ಟ್‌ಅಪ್‌ಗಳಾಗಿ ರೂಪುಗೊಳ್ಳಬಲ್ಲವು.

ಇಂದಿನ ಪರಿಸ್ಥಿತಿಯಲ್ಲಿ ಈ ಪ್ರಾಜೆಕ್ಟ್‌ಗಳು ಲ್ಯಾಬ್ ಪರೀಕ್ಷೆ ಮತ್ತು ವರದಿ ಸಲ್ಲಿಕೆಗೆ ಸೀಮಿತವಾಗುತ್ತವೆ. ಆದರೆ ಐಟಿ ಪಾರ್ಕ್ ಮತ್ತು ಇಂಕ್ಯೂಬೇಷನ್ ವ್ಯವಸ್ಥೆಯು ತುಮಕೂರು ಜಿಲ್ಲೆಗೆ ಬಂದರೆ: • ವಿದ್ಯಾರ್ಥಿ ಪ್ರಾಜೆಕ್ಟ್‌ಗಳು ಉತ್ಪನ್ನಗಳಾಗಬಹುದು • ಫ್ಯಾಕಲ್ಟಿ ಸದಸ್ಯರು ಮೆಂಟರ್‌ಗಳಾಗಿ ಮಾರ್ಗದರ್ಶನ ನೀಡಬಹುದು • ಸಂಶೋಧನೆ – ಉತ್ಪನ್ನ – ಮಾರುಕಟ್ಟೆ ಎಂಬ ಸರಪಳಿ ನಿರ್ಮಾಣವಾಗಬಹುದು.ಇದರಿಂದ ಎಂಟು ಕಾಲೇಜುಗಳು ಒಟ್ಟಾಗಿ ಜಿಲ್ಲೆಯ ನವೋದ್ಯಮಯಾತ್ರೆಯ ಭಾಗವಾಗಬಹುದು.

### ಶೇರ್‌ಡ್ ಲ್ಯಾಬ್ ಮತ್ತು ಕೈಗಾರಿಕಾ ಸಂಪರ್ಕ

ಇಲ್ಲಿ ಒಂದು ಜಿಲ್ಲಾಮಟ್ಟದ ಐಟಿ–ಇನೋವೇಷನ್ ಪರಿಸರ ನಿರ್ಮಾಣವಾದರೆ, ಎಲ್ಲಾ ಕಾಲೇಜುಗಳು ತಮ್ಮದೇ ಆದ ದುಬಾರಿ ಲ್ಯಾಬ್ ನಿರ್ಮಿಸುವ ಅಗತ್ಯವಿರುವುದಿಲ್ಲ. GPU ಲ್ಯಾಬ್‌ಗಳು, AI/ML ಸೌಲಭ್ಯಗಳು, IoT ಮತ್ತು ರೋಬೋಟಿಕ್ಸ್ ಲ್ಯಾಬ್‌ಗಳನ್ನು ಎಲ್ಲ ಕಾಲೇಜುಗಳೂ ಸಂಪನ್ಮೂಲವಾಗಿ ಬಳಸಬಹುದು. ಇದರಿಂದ ಕಾಲೇಜುಗಳ ವೆಚ್ಚದಲ್ಲಿ ಉಳಿತಾಯವಾಗುತ್ತದೆ ಮತ್ತು ವಿದ್ಯಾರ್ಥಿಗಳಿಗೆ ಕೈಗಾರಿಕೆಗಳ ಮಟ್ಟದ ಅನುಭವೂ ದೊರೆಯುತ್ತದೆ..

ಅದೇ ರೀತಿ, ಐಟಿ ಕಂಪನಿಗಳು ಮತ್ತು ಸ್ಟಾರ್ಟ್‌ಅಪ್‌ಗಳು ತುಮಕೂರಿನಲ್ಲಿ ನೆಲೆಸಿದರೆ, ಇಂಟರ್ನ್‌ಶಿಪ್, ಲೈವ್ ಪ್ರಾಜೆಕ್ಟ್ ಮತ್ತು ಪ್ಲೇಸ್ಮೆಂಟ್ ಅವಕಾಶಗಳು ಸಹಜವಾಗಿ ಹೆಚ್ಚಾಗುತ್ತವೆ. "ಕಾಲೇಜು – ಬೆಂಗಳೂರು – ಉದ್ಯೋಗ" ಎಂಬ ಮಾದರಿಯು "ಕಾಲೇಜು – ತುಮಕೂರು – ಉದ್ಯೋಗ" ಎಂಬ ಹೊಸ ಮಾದರಿಯಾಗಿ ರೂಪುಗೊಳ್ಳಬಹುದು.

### ಐಟಿ ಕಂಪನಿಗಳಿಗೆ ತುಮಕೂರು ಯೋಗ್ಯವೇ?

ಈ ಪ್ರಶ್ನೆಗೆ ಉತ್ತರ ಸ್ಪಷ್ಟ. ಬೆಂಗಳೂರಿಗೆ ಸಮೀಪವಾದರೂ ಇಲ್ಲಿ ಜನಸಂಖ್ಯೆಯ ಒತ್ತಡ ಕಡಮೆ; ಕಾರ್ಯನಿರ್ವಹಣೆಯ ವೆಚ್ಚದಲ್ಲಿ ಉಳಿತಾಯ; ಸಮೀಪದಲ್ಲಿಯೇ ದೊರೆಯುವ ಕೈಗಾರಿಕಾ ಗ್ರಾಹಕರು; ಸ್ಥಳೀಯ ಪ್ರತಿಭೆಯ ಲಭ್ಯತೆ; ಉತ್ತಮ ರಸ್ತೆ ಮತ್ತು ರೈಲು ಸಂಪರ್ಕ – ಇವೆಲ್ಲವುಗಳಿಂದ ತುಮಕೂರು ಎರಡನೆಯ ಹಂತದ ಐಟಿ ಹಬ್ ಆಗಲು ಯೋಗ್ಯವಾಗಿದೆ. ಅನೇಕ ಐಟಿ ಕಂಪನಿಗಳು ತಮ್ಮ ಆಡಳಿತ ಹಾಗೂ ನಿರ್ವಹಣೆಯ ವೆಚ್ಚಗಳನ್ನು ಕಡಿತಗೊಳಿಸಲು ಎರಡನೆಯ ಹಂತದ ನಗರಗಳತ್ತ ಮುಖ ಮಾಡುತ್ತಿರುವ ಇಂದಿನ ಸಂದರ್ಭದಲ್ಲಿ, ತುಮಕೂರು ಬೆಂಗಳೂರಿಗೆ ಅತ್ಯುತ್ತಮ ಪರ್ಯಾಯವಾಗಿದೆ.

### ಪ್ರಾದೇಶಿಕ ಸಮತೋಲನ: ನೀತಿ ನಿರ್ಧಾರಕರ ಪರೀಕ್ಷೆ

ಇಂದು ಕರ್ನಾಟಕ ಸರ್ಕಾರ ಪ್ರಾದೇಶಿಕ ಸಮತೋಲನದಿಂದ ಕೂಡಿದ ಅಭಿವೃದ್ಧಿಯ ಅಗತ್ಯವನ್ನು ಒಪ್ಪಿಕೊಂಡಿದೆ. ಆದರೆ ಇದು ಕಾರ್ಯರೂಪಕ್ಕೆ ಬರಬೇಕಾದರೆ, ತುಮಕೂರಿನಂತಹ ಜಿಲ್ಲೆಗಳತ್ತ ಗಮನಹರಿಸುವುದು ಈಗಿನ ಅಗತ್ಯ. ಬೆಂಗಳೂರಿನ ಮೇಲಿರುವ ಒತ್ತಡವನ್ನು ಕಡಮೆ ಮಾಡಲು ಮತ್ತು ಉದ್ಯೋಗಗಳನ್ನು ವಿಕೇಂದ್ರಿಕರಿಸಲು, ಟಿಯರ್–2 ನಗರಗಳಲ್ಲಿ ಐಟಿ ಮತ್ತು ಸ್ಟಾರ್ಟ್‌ಅಪ್ ಪರಿಸರಗಳ ನಿರ್ಮಾಣ ಅನಿವಾರ್ಯ.

### ಕೊನೆಯ ಮಾತು

ತುಮಕೂರು ಹಿಂದುಳಿದ ಜಿಲ್ಲೆಯಲ್ಲ. ಇಲ್ಲಿ ದೊರೆಯುವ ಅವಕಾಶಗಳನ್ನು ಜನತೆ ಸಂಪೂರ್ಣವಾಗಿ ಬಳಸಿಕೊಂಡಿಲ್ಲ.. ಇಲ್ಲಿ ಕೈಗಾರಿಕೆಗಳು ಇವೆ, ಶಿಕ್ಷಣ ಸೌಲಭ್ಯ ಉತ್ತಮವಾಗಿದೆ, ಬಳಸಿಕೊಳ್ಳಬಹುದಾದ ಪ್ರತಿಭೆ ಯಥೇಚ್ಛವಾಗಿದೆ. ಆದರೆ, ಈಗ ಬೇಕಾಗಿರುವುದು ಎಲ್ಲವನ್ನು ಬಳಸಿಕೊಳ್ಳಬಹುದಾದ ಐಟಿ–ನವೋದ್ಯಮ ಪರಿಸರ. ಅದನ್ನು ಸಮರ್ಥವಾಗಿ ಕಾರ್ಯಗತಗೊಳಿಸುವ ಚಿಂತನೆಯು ಸರ್ಕಾರಕ್ಕೆ ಮೂಡಿ ಮತ್ತು ನೀತಿಗಳನ್ನು ರೂಪಿಸಿ ಅವನ್ನು ಅನುಷ್ಠಾನಗೊಳಿಸಿದರೆ, ಕರ್ನಾಟಕದ ಐಟಿ ಮತ್ತು ಸ್ಟಾರ್ಟ್‌ಅಪ್ ನಕ್ಷೆಯಲ್ಲಿ ತುಮಕೂರು ತನ್ನದೇ ಆದ ಸ್ಥಾನವನ್ನು ಪಡೆಯಬಹುದು. ಇದು ಕೇವಲ ಒಂದು ಜಿಲ್ಲೆಯ ಪ್ರಶ್ನೆಯಾಗದೆ ಇಡೀ ಕರ್ನಾಟಕದ ಭವಿಷ್ಯದ ಅಭಿವೃದ್ಧಿಯ ವಿಷಯ.

# ಬ್ರಹ್ಮದೇವಯ್ಯ: ಶ್ರೀದೇವಿ ವಿದ್ಯಾಸಂಸ್ಥೆಯ ಅಮೂಲ್ಯ ರತ್ನ!

ಶ್ರೀದೇವಿ ವಿದ್ಯಾಸಂಸ್ಥೆಯ ಆಡಳಿತಾಧಿಕಾರಿಯಾಗಿದ್ದ ಟಿ.ವಿ. ಬ್ರಹ್ಮದೇವಯ್ಯ (1956–2026) ಅವರು ಜನವರಿ 29ರಂದು ದಿಢೀರನೆ ನಿಧನರಾದರು. ಅಂದೇ ಶ್ರೀದೇವಿ ಕಾಲೇಜಿನಲ್ಲಿ ಅವರನ್ನು ಕುರಿತಾದ ಶ್ರದ್ಧಾಂಜಲಿ ಕಾರ್ಯಕ್ರಮವಿತ್ತು. ಅದರಲ್ಲಿ ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್ ಮಾತನಾಡುತ್ತಾ "ಇಂದು ನಮ್ಮನ್ನು ಅಗಲಿರುವ ಟಿ.ವಿ. ಬ್ರಹ್ಮದೇವಯ್ಯ ಅವರಿಗೆ ಶ್ರದ್ಧಾಂಜಲಿ ಅರ್ಪಿಸುವುದು ಮನಸ್ಸಿಗೆ ಅತ್ಯಂತ ಕಠಿಣವೆನಿಸುತ್ತಿರುವ ಕೆಲಸ. ಶ್ರೀಯುತರು ಜನವರಿ 26ರಂದು ಗಣರಾಜ್ಯೋತ್ಸವದ ದಿನ ನಮ್ಮ ಜೊತೆ ಕಳೆದಿದ್ದಾರೆ. ಇಂದು ಅವರಿಲ್ಲ. ನೋಡಿ, ಬದುಕು ಎಷ್ಟು ಅನಿಶ್ಚಿತ! ನಾನವರನ್ನು ಹೆಚ್.ಎಂ.ಟಿ. ಕಾರ್ಖಾನೆಯಲ್ಲಿ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದ ದಿನಗಳಿಂದಲೂ ಬಲ್ಲವನಾಗಿದ್ದೇನೆ. ಅಲ್ಲಿ ಅವರು ಸ್ವಯಂನಿವೃತ್ತಿ ಪಡೆದ ಮೇಲೆ ಶ್ರೀದೇವಿ ಶಿಕ್ಷಣ ಸಂಸ್ಥೆಗೆ ಬಂದರು. ಈ ಸಂಸ್ಥೆಯ ಬೆಳವಣಿಗೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅವರ ಮತ್ತು ಸಂಸ್ಥೆಯ ಸಂಬಂಧ ನೌಕರ–ಯಜಮಾನರ ನಡುವಿನ ಸಂಬಂಧವಾಗಿರಲಿಲ್ಲ. ಅದು ಕುಟುಂಬದ ಸದಸ್ಯರ ನಡುವಿನ ಸಂಬಂಧವಾಗಿತ್ತು. ಬ್ರಹ್ಮದೇವಯ್ಯ ಅವರು ಶ್ರೀದೇವಿ ಸಂಸ್ಥೆಯ ಕೆಲಸಗಳನ್ನು ತಮ್ಮ ಮನೆಯ ಕೆಲಸವೆಂದು ಭಾವಿಸಿದ್ದರು. ನಮಗೂ ಅಷ್ಟೇ ಬ್ರಹ್ಮದೇವಯ್ಯ ಅವರಿಗೆ ಆ ಕೆಲಸವನ್ನು ವಹಿಸಿದ್ದೇವೆಂದರೆ ನೆಮ್ಮದಿಯಿರುತ್ತಿತ್ತು. ಆ ಕೆಲಸ ತಾರ್ಕಿಕ ಅಂತ್ಯ ಕಾಣುತ್ತದೆನ್ನುವ ವಿಶ್ವಾಸವಿರುತ್ತಿತ್ತು. ಅವರು ಅತ್ಯಂತ ನಿಷ್ಠಾವಂತ ಹಾಗೂ ಪ್ರಾಮಾಣಿಕ ಅಧಿಕಾರಿ. ಸಂಸ್ಥೆಯಲ್ಲಿರುವ ಎಲ್ಲರೂ ಅವರನ್ನು ಇಂದು ಖಂಡಿತ ಜ್ಞಾಪಿಸಿಕೊಳ್ಳುತ್ತಾರೆ. ಅವರ ಜಾಗವನ್ನು ತುಂಬುವುದು ತುಂಬಾ ಕಷ್ಟ. ಇನ್ನು ಅವರ ಮನೆಯವರ ದುಃಖ ಎಷ್ಟಿರುತ್ತದೆ ಎನ್ನುವುದು ಊಹೆಗೂ ನಿಲುಕದ ವಿಚಾರ. ಶ್ರೀಮತಿ ನಂದಿನಿ ಬ್ರಹ್ಮದೇವಯ್ಯ, ಮಕ್ಕಳಾದ ನಮ್ರತಾ ದೇವ್ ಹಾಗೂ ಅರ್ಪಿತಾ ದೇವ್ ಅವರಿಗೆ ಈ ದುಃಖವನ್ನು ಸಹಿಸುವ ಶಕ್ತಿಯನ್ನು ಶ್ರೀದುರ್ಗಾಂಬಿಕಾದೇವಿ ಕರುಣಿಸಲಿ. ಅವರ ಮಕ್ಕಳಿಬ್ಬರೂ ನಮ್ಮ ಸಂಸ್ಥೆಯಿಂದಲೇ ಸ್ನಾತಕೋತ್ತರ ಪದವಿ ಪಡೆದಿದ್ದರು. ತಮ್ಮೆಲ್ಲರ ಜೊತೆ ಮಾತನಾಡಿ ಬ್ರಹ್ಮದೇವಯ್ಯ ಅವರ ನೆನಪನ್ನು ಅರ್ಥಪೂರ್ಣವಾಗಿ ಹೇಗೆ ನಮ್ಮಲ್ಲಿ ಸ್ಥಿರಗೊಳಿಸುವುದು ಎನ್ನುವುದನ್ನು ತೀರ್ಮಾನ ಮಾಡುವ ಯೋಚನೆಯಿದೆ" ಎಂದರು.

ಶ್ರೀದೇವಿ ಮೆಡಿಕಲ್ ಕಾಲೇಜಿನ ನಿರ್ದೇಶಕರಾದ ಡಾ. ರಮಣ್ ಎಂ. ಹುಲಿನಾಯ್ಕರ್ ಅವರು "ಟಿ.ವಿ. ಬ್ರಹ್ಮದೇವಯ್ಯ ಅವರು ತುಂಬಾ ಸರಳ ಮತ್ತು ಸಜ್ಜನವ್ಯಕ್ತಿ. ಶ್ರೀದೇವಿ ಸಂಸ್ಥೆಯ ಯಾವುದೇ ಕೆಲಸವಾದರೂ ಹಗಲು ರಾತ್ರಿ ಎನ್ನದೇ ಶ್ರಮಿಸುತ್ತಿದ್ದವರು. ಅವರು ಇಂದು ನಮ್ಮನ್ನು ಅಗಲಿರುವುದು




ಶ್ರೀದೇವಿ ಶಿಕ್ಷಣ ಸಂಸ್ಥೆ ಹಾಗೂ ವೈಯಕ್ತಿಕವಾಗಿ ನನಗೆ ತುಂಬಲಾರದ ನಷ್ಟವಾಗಿದೆ. ಅವರಿಗೆ ಶ್ರೀದೇವಿ ಸಂಸ್ಥೆಯ ಕೆಲಸದಲ್ಲಿದ್ದ ಉತ್ಸಾಹ ಇಂದಿನ ಯುವಕರಿಗೆ ಮಾದರಿಯಾಗಬೇಕು. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ದೇವರಲ್ಲಿ ಕೇಳಿ ಕೊಳ್ಳುತ್ತೇನೆ" ಎಂದರು.

ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥರಾದ ಎಂ.ಎಸ್. ಪಾಟೀಲ್ ಅವರು "ಟಿ.ವಿ. ಬ್ರಹ್ಮದೇವಯ್ಯ ಅವರು ನಮಗೆಲ್ಲಾ ಸ್ಫೂರ್ತಿಯ ಚಿಲುಮೆಯಾಗಿದ್ದರು. ಅವರದು ಯಾವಾಗಲೂ ನಗುಮುಖ. ಅನಾರೋಗ್ಯದ ಸಮಯದಲ್ಲೂ ಸಂಸ್ಥೆಯ ಚಟುವಟಿಕೆಗಳನ್ನು ಕುರಿತು ವಿಚಾರಿಸುತ್ತಿದ್ದರು. ವ್ಯಕ್ತಿಯ ಮೌಲ್ಯಮಾಪನ ಅವರ ಸಾಧನೆಯಿಂದ ಆಗುತ್ತದೆ. ಬ್ರಹ್ಮದೇವಯ್ಯ ಅವರು ಇವತ್ತು ತಮ್ಮ ಸಾಧನೆಯಿಂದ ಅಮರರಾಗಿದ್ದಾರೆ. ಅವರ ನೆನಪು ಯಾವಾಗಲೂ ನಮ್ಮೊಟ್ಟಿಗಿರುತ್ತದೆ. ಇಂತಹ ನಿಷ್ಠಾವಂತ ವ್ಯಕ್ತಿಯನ್ನು ಕಳೆದುಕೊಂಡಿರುವುದು ದುಃಖಕರವಾದ ಸಂಗತಿ" ಎಂದರು.

ಶ್ರೀದೇವಿ ಚಾರಿಟಬಲ್ ಟ್ರಸ್ಟಿಯಾದ ಡಾ. ಲಾವಣ್ಯ ರಮಣ್ ಅವರು "ಟಿ.ವಿ. ಬ್ರಹ್ಮದೇವಯ್ಯ ಶ್ರಮಜೀವಿ, ಪ್ರಾಮಾಣಿಕ ವ್ಯಕ್ತಿ, ನಮ್ಮೆಲ್ಲರಿಗೂ ಸ್ಫೂರ್ತಿಯಾಗಿದ್ದರು. ಕೊನೆಯ ದಿನಗಳಲ್ಲಿ ಅವರದು ಕಾಯಿಲೆಯ ವಿರುದ್ಧ ಹೋರಾಟದ ಬದುಕಾಗಿತ್ತು. ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ನಾನು ದೇವರಲ್ಲಿ ಪ್ರಾರ್ಥಿಸುತ್ತೇನೆ" ಎಂದರು.

ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಎಂ.ಬಿ.ಎ. ವಿಭಾಗದ ಮುಖ್ಯಸ್ಥರಾದ ಡಾ. ಕೆ.ಎಸ್. ರಾಮಕೃಷ್ಣ ಅವರು "ಮನುಷ್ಯ ಹುಟ್ಟುಸಾವುಗಳ ನಡುವಿನ ಬದುಕಿನಲ್ಲಿ ತನ್ನ ಛಾಪನ್ನು ಮೂಡಿಸಬೇಕು. ಶ್ರೀದೇವಿ ಸಂಸ್ಥೆಯಲ್ಲಿ ಬ್ರಹ್ಮದೇವಯ್ಯ ಅವರು ಮೂಡಿಸಿರುವ ಛಾಪು ಅಳಿಸಲಾಗದಂತಹುದು. ಅವರು ನನ್ನ ಹೆಮ್ಮೆಯ ಸಹೋದ್ಯೋಗಿ. ನಾನವರನ್ನು ತುಂಬಾ ಹತ್ತಿರದಿಂದ ನೋಡಿದ್ದೇನೆ. ಅವರು ನಮ್ಮ ಸಂಸ್ಥೆಯ ಆಧಾರಸ್ತಂಭವಾಗಿದ್ದವರು. ಇಂದು ಅವರನ್ನು ಕಳೆದುಕೊಂಡಿರುವುದು ತುಂಬಾ ನೋವಿನ ಸಂಗತಿ" ಎಂದರು.

ಶ್ರೀದೇವಿ ಪ್ಯಾರಾಮೆಡಿಕಲ್ ಕಾಲೇಜಿನ ಉಪಪ್ರಾಂಶುಪಾಲರಾದ ಡಾ. ಸಿ.ಪಿ. ಚಂದ್ರಪ್ಪ ಅವರು "ಟಿ.ವಿ. ಬ್ರಹ್ಮದೇವಯ್ಯ ಅವರು ಎಲ್ಲರಿಗೂ ಬಹಳ ಆತ್ಮೀಯರಾಗಿದ್ದ ವ್ಯಕ್ತಿ. ಎಲ್ಲರನ್ನೂ ಒಂದೇ ರೀತಿ ನೋಡುವಂತಹ ಸ್ವಭಾವದವರು. ಅವರು ಪ್ರತಿಯೊಬ್ಬರಿಗೂ ಮಾದರಿಯಾಗಿದ್ದವರು. ತುಂಬಾ ಒಳ್ಳೆಯ ಮನುಷ್ಯ. ದೇವರು ಅವರ ಆತ್ಮಕ್ಕೆ ಶಾಂತಿ ಕೊಡಲಿ" ಎಂದರು.

ಶ್ರೀರಮಣ ಮಹರ್ಷಿ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಎಸ್. ಉಷಾ ಅವರು "ಮಾನ್ಯ ಬ್ರಹ್ಮದೇವಯ್ಯ ಅವರು ನಮಗೆ ಯಾವಾಗಲೂ ಹೇಳುತ್ತಿದ್ದ ವಿಷಯವೆಂದರೆ ನಿಮ್ಮ ಸಮಸ್ಯೆಯನ್ನು ನೀವೇ ನಗುಮುಖದಿಂದ ಪರಿಹಾರ ಮಾಡಿಕೊಳ್ಳಬಹುದು. ಆತ್ಮ ಮತ್ತು ಮನಸ್ಸಿಗೆ ಕಾಯಿಲೆ ಬರುವುದಿಲ್ಲ. ದೇಹಕ್ಕೆ ಕಾಯಿಲೆ ಬರುತ್ತದೆ. ಅದನ್ನು ಸವಾಲಿನ ರೂಪದಲ್ಲಿ ನಗುನಗುತ್ತಾ ಎದುರಿಸಬೇಕು ಎಂದವರು ಹೇಳುತ್ತಿದ್ದುದು ಮಾತ್ರವಲ್ಲ, ಅದರಂತೆ ನಡೆದುಕೊಂಡರು. ಅವರೊಬ್ಬ ರೋಲ್ ಮಾಡಲ್. ದೈಹಿಕವಾಗಿ ಇಂದು ನಮ್ಮ ಜೊತೆಗಿರದಿದ್ದರೂ ಮಾನಸಿಕವಾಗಿ ಸದಾ ನಮ್ಮ ಜೊತೆಯಿರುತ್ತಾರೆ" ಎಂದರು.

ಶ್ರೀದೇವಿ ಪ್ಯಾರಾಮೆಡಿಕಲ್ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಂ.ಸಿ. ಕೃಷ್ಣ ಅವರು "ಟಿ.ವಿ. ಬ್ರಹ್ಮದೇವಯ್ಯ ಅವರು ಯಾವ ಕೆಲಸವನ್ನೇ ಕೈಗೆತ್ತಿಕೊಂಡರೂ ಅದನ್ನು ಸವಾಲಾಗಿ ತೆಗೆದುಕೊಂಡು ಅತ್ಯುತ್ತಮವಾಗಿ ಪೂರ್ಣಗೊಳಿಸುತ್ತಿದ್ದರು" ಎಂದರು.

ಶ್ರೀದೇವಿ ಚಾರಿಟಬಲ್ ಟ್ರಸ್ಟ್ ಲೆಕ್ಕಪರಿಶೋಧಕರು ವಿಕ್ಟರ್ ಪ್ರಸಾದ್ ಅವರು "ಟಿ.ವಿ. ಬ್ರಹ್ಮದೇವಯ್ಯ ಅವರ ಜೊತೆಗೆ ಇಪ್ಪತ್ತು ವರ್ಷಗಳ ಕಾಲ ಕೆಲಸ ಮಾಡಿದ್ದೇನೆ. ಈ ಸಂಸ್ಥೆಯ ಅನೇಕ ಸಾಧನೆಗಳ ವರ್ಕಿಂಗ್ ಟೀಮ್ ನಮ್ಮದು. ಇಂದು ನಮ್ಮ ಪಾರ್ಟ್ನರ್ ನನ್ನ ಜೊತೆಯಿಲ್ಲ. ಅವರು ನಮ್ಮ ಕುಟುಂಬದ ಸದಸ್ಯರಂತೆ ಇದ್ದರು. ಅವರು ನಮಗೆ ಶಕ್ತಿ ಮತ್ತು ಬೆಂಬಲವಾಗಿರುತ್ತಿದ್ದರು. ಅವರ ಪ್ರತಿಯೊಂದು ಸಾಧನೆಯ ಹಿಂದೆ ಕಠಿಣ ಪರಿಶ್ರಮ, ಪ್ರಾಮಾಣಿಕತೆ ಮತ್ತು ನಿಷ್ಠೆಗಳಿರುತ್ತಿದ್ದವು. ನಾವವರನ್ನು ಕಳೆದುಕೊಂಡಿದ್ದರೂ ಅವರ ನೆನಪು ಮತ್ತು ಸಾಧನೆಗಳು ಸದಾಕಾಲ ನಮ್ಮ ಜೊತೆಗಿರುತ್ತವೆ" ಎಂದರು.

ಶ್ರೀದೇವಿ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಆರ್.ಕೆ. ಮುನಿಸ್ವಾಮಿ ಅವರು "ನನ್ನ ಮತ್ತು ಅವರ ಒಡನಾಟ ಹತ್ತು ವರ್ಷಗಳದು. ಅವರ ಸ್ನೇಹಭಾವ ಹಾಗೂ ತ್ಯಾಗಮಯಿ ಜೀವನ ಸದಾ ಸ್ಮರಣೆಗೆ ಅರ್ಹವಾಗಿದೆ" ಎಂದರು.

ಶ್ರೀದೇವಿ ದುರ್ಗಾಂಬಾ ಸ್ಕೂಲ್ ಆಫ್ ನರ್ಸಿಂಗ್ ಪ್ರಾಂಶುಪಾಲೆ ಪ್ರೊ. ಅಂಬಾ ಅವರು "ಬ್ರಹ್ಮದೇವಯ್ಯ ಅವರು ನನಗೆ ಇದೇ ಕಾಲೇಜಿನ ಪ್ರಿನ್ಸಿಪಾಲ್ ಆಗುತ್ತೀಯೆಂದು ಆಶೀರ್ವಾದ ಮಾಡಿದ್ದರು. ಅದರ ಫಲ ನಾನಿಲ್ಲಿದ್ದೇನೆ. ಇಂದು ನಾನು ನಮ್ಮ ಮನೆಯ ಹಿರಿಯರೊಬ್ಬರನ್ನು ಕಳೆದುಕೊಂಡಿದ್ದೇನೆ. ಅವರು ಎಲ್ಲರಿಗೂ ಸಹಾಯ ಮಾಡುತ್ತಿದ್ದ ವ್ಯಕ್ತಿ" ಎಂದು ಭಾವುಕರಾಗಿ ನುಡಿದರು.

ನರ್ಸಿಂಗ್ ಕಾಲೇಜಿನ ಪ್ರೊ. ಭೀಮರಾಜು ಅವರು "ಬ್ರಹ್ಮದೇವಯ್ಯ ಅವರ ವ್ಯಕ್ತಿತ್ವ ಅತ್ಯಂತ ಮನನೀಯವಾದದ್ದು. ಎಲ್ಲರೊಂದಿಗೂ ಅವರು ಹೊಂದಿದ್ದ ಆತ್ಮೀಯ ಸಂಪರ್ಕ ಮತ್ತು ಉತ್ತಮ ಸಂವಹನಕ್ರಿಯೆಗಳಿಂದ ಸಂಸ್ಥೆಗೆ ಒಳ್ಳೆಯದಾಗಿದೆ. ಅವರ ನೆನಪು ಸದಾ ಕಾಲ ಉಳಿಯುತ್ತದೆ" ಎಂದರು.

ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಪ್ರವೇಶ ವಿಭಾಗದ ಮುಖ್ಯಸ್ಥೆ ಶ್ರೀಮತಿ ರೂಪ ನಟೇಶ್ವರ್ಣೆ ಅವರು "ಬ್ರಹ್ಮದೇವಯ್ಯ ಅವರು ಯಾವುದೇ ಕೆಲಸವನ್ನು ಕಷ್ಟವೆಂದು ಎಂದಿಗೂ ಭಾವಿಸುತ್ತಿರಲಿಲ್ಲ. ಎಲ್ಲ ವಿಚಾರಗಳನ್ನು ಸುಲಭವಾಗಿ ಆಲೋಚಿಸಿ ತುಂಬಾ ವೇಗವಾಗಿ ಅದನ್ನು ಕಾರ್ಯಗತಗೊಳಿಸುತ್ತಿದ್ದರು. ಇಂದವರು ಭೌತಿಕವಾಗಿ ನಮ್ಮ ಜೊತೆಯಲ್ಲಿಲ್ಲದಿದ್ದರೂ, ಸುತ್ತಮುತ್ತ ಇಲ್ಲೇ ಇದ್ದು ನಮ್ಮನ್ನು ಮುನ್ನಡೆಸಿಕೊಂಡು ಹೋಗುತ್ತಾರೆ ಎಂಬ ಭಾವನೆ ಸದಾ ಕಾಲ ನನ್ನಲ್ಲಿರುತ್ತದೆ" ಎಂದರು.

ಬ್ರಹ್ಮದೇವಯ್ಯ ಅವರ ಮಗಳು ಅರ್ಪಿತ ದೇವ್ ಖಾಸಗಿಯಾಗಿ ಮಾತನಾಡುತ್ತಾ "ನಮ್ಮ ಅಪ್ಪಾಜಿ ಅವರು ತಮಗೆ ಕ್ಯಾನ್ಸರ್ ಬಂದಿದೆ ಎನ್ನುವುದು ತಿಳಿದಾಗ ಅವರು ವರ್ತಿಸಿದ ರೀತಿ ನನಗೆ ನಿಜಕ್ಕೂ ಹೆಮ್ಮೆ ಎನಿಸುತ್ತದೆ. ಅಂತಹ ನೋವಿನಲ್ಲೂ ಅವರು ಕಾಯಿಲೆಗೆ ಶರಣಾಗಲಿಲ್ಲ. ಸ್ವಲ್ಪ ಬಿಡುವು ದೊರೆತಾಗಲೂ ಶ್ರೀದೇವಿ ಸಂಸ್ಥೆಯ ಕೆಲಸ ಮಾಡುತ್ತಿದ್ದರು. ಅಪ್ಪಾಜಿಗೆ ಡಾ. ಹುಲಿನಾಯ್ಕರ್ ಅಂಕಲ್ ದೇವರ ಸಮಾನ. ನಮಗೆ ಅದನ್ನು ಅನೇಕ ಸಲ ಹೇಳಿದ್ದಾರೆ. ಅವರು ಜೀವನವನ್ನು ಹೇಗೆ ಎದುರಿಸಬೇಕು ಎನ್ನುವುದನ್ನು ತಮ್ಮ ಕೊನೆಯ ದಿನಗಳಲ್ಲಿ ತಾವು ಅನುಸರಿಸಿ ತೋರಿಸಿಕೊಟ್ಟಿದ್ದಾರೆ. ಕಷ್ಟಗಳನ್ನು ಎದುರಿಸುವ ಮನೋಧರ್ಮವನ್ನು ನಮ್ಮಲ್ಲಿ ಬೆಳೆಸಿದ್ದಾರೆ" ಎಂದರು.

ಇನ್ನೂ ಅನೇಕರು ಟಿ.ವಿ. ಬ್ರಹ್ಮದೇವಯ್ಯ ಅವರ ಗುಣಗಾನ ಮಾಡಿದರು. ಎಲ್ಲರೂ ಕೊನೆಯಲ್ಲಿ ಒಂದು ನಿಮಿಷ ಮೌನ ಪ್ರಾರ್ಥನೆ ಸಲ್ಲಿಸಿ, ಅವರ ಆತ್ಮಕ್ಕೆ ಶಾಂತಿ ಕೋರಿದರು. ಅವರ ಕುಟುಂಬವರ್ಗಕ್ಕೆ ಪರಮಾತ್ಮ ಈ ದುಃಖವನ್ನು ಸಹಿಸುವ ಶಕ್ತಿಯನ್ನು ಕರುಣಿಸಲಿ ಎಂದು ಪ್ರಾರ್ಥಿಸಿದರು.

**▪ ವರದಿ: ಶೃತಿ ಬೆಳ್ಳಿಯಾರ್ ಹೆಚ್ ವಿ**

# ರಾಷ್ಟ್ರೀಯ ಪೌಷ್ಟಿಕ ಆಹಾರ ದಿನಾಚರಣೆ

"ಆರೋಗ್ಯಕ್ಕೆ ಉತ್ತೇಜನ, ರೋಗಪ್ರತಿರೋಧ ಮತ್ತು ಸರಿಯಾದ ಪೋಷಣೆಯ ಮೂಲಕ ಜೀವನಮಟ್ಟ ಸುಧಾರಣೆಯಲ್ಲಿ ಡಯಟಿಷಿಯನ್‌ಗಳು ಹಾಗೂ ಪೋಷಣಾತಜ್ಞರು ಮಹತ್ವದ ಪಾತ್ರವನ್ನು ವಹಿಸುತ್ತಾರೆ ಎನ್ನುವುದರ ಬಗೆಗೆ ಜಾಗೃತಿಯನ್ನು ಉಂಟುಮಾಡುವುದಕ್ಕಾಗಿ ಇಂದು ರಾಷ್ಟ್ರೀಯ ಪೌಷ್ಟಿಕ ಆಹಾರ ದಿನಾಚರಣೆಯನ್ನು ಆಚರಿಸುತ್ತೇವೆ. ಇಂದು ಆಹಾರ ಪದ್ಧತಿಗಳ ಮಹತ್ವವನ್ನು ಒತ್ತಿ ಹೇಳುವ ದಿನವೂ ಹೌದು. ಜೀವನದ ಎಲ್ಲಾ ಹಂತಗಳಲ್ಲೂ ಸಮತೋಲನ ಆಹಾರದ ಪರಿಣಾಮ ಕುರಿತು ಜನರಲ್ಲಿ ಜಾಗೃತಿ ಮೂಡಿಸುವುದು ನಮ್ಮ ಪ್ರಯತ್ನವಾಗಬೇಕು. ಪ್ರತಿವರ್ಷವೂ ಸಾರ್ವಜನಿಕ ಆರೋಗ್ಯ ಪೋಷಣೆ, ಸ್ಥಿರತೆಯುಳ್ಳ ಆಹಾರ ಪದ್ಧತಿಯನ್ನು ಈ ದಿನ ಎಲ್ಲರ ಗಮನಕ್ಕೆ ತರುತ್ತದೆ. ವಿದ್ಯಾರ್ಥಿಗಳು ಸಮತೋಲನ ಆಹಾರ, ಆರೋಗ್ಯಕರ ಆಹಾರ ಮತ್ತು ಅನಾರೋಗ್ಯಕರ ಆಹಾರಗಳ ನಡುವಿನ ವ್ಯತ್ಯಾಸ, ಮಧುಮೇಹಿಗಳು ತಿಳಿದುಕೊಳ್ಳಬೇಕಾದ 'ಊಟದ ತಟ್ಟೆ'ಯ (ಮೀಲ್‌ಪ್ಲೇಟ್) ವಿಷಯ, ಆರೋಗ್ಯಕರ ಜೀವನಶೈಲಿ, ಪೋಷಕಾಂಶ ಕೊರತೆ ಹಾಗೂ ಡಯಾಬಿಟಿಸ್ ಮೆಲ್ಲಿಟಸ್, ಹೃದಯ ಸಂಬಂಧಿ ರೋಗಗಳು ಸೇರಿದಂತೆ ಸಾಂಕ್ರಾಮಿಕವಲ್ಲದ ರೋಗಗಳನ್ನು ತಡೆಗಟ್ಟುವಲ್ಲಿ ಆಹಾರದಲ್ಲಿನ ಪೋಷಣೆಯ ಪಾತ್ರವನ್ನು ತಿಳಿದುಕೊಳ್ಳಬೇಕು" ಎಂದು ಶ್ರೀದೇವಿ ಆಸ್ಪತ್ರೆಯ ನ್ಯೂಟ್ರಿಷನ್ ವಿಭಾಗದ ಮುಖ್ಯಸ್ಥರಾದ ಡಿ.ಎಂ. ನೇತ್ರಾವತಿಯವರು ತಿಳಿಸಿದರು.

ಶ್ರೀದೇವಿ ಮೆಡಿಕಲ್ ಮತ್ತು ಸಂಶೋಧನಾ ಆಸ್ಪತ್ರೆಯ ಪೋಷಣಾ ವಿಭಾಗದ ವತಿಯಿಂದ ರಾಷ್ಟ್ರೀಯ ಪೌಷ್ಟಿಕ ಆಹಾರ ದಿನಾಚರಣೆಯನ್ನು ಜನವರಿ 10ರಂದು ಆಯೋಜಿಸಲಾಗಿತ್ತು. ಅದರ ಅಂಗವಾಗಿ ಜಿ.ಎನ್.ಎಂ. ಮತ್ತು ಬಿ.ಎಸ್ಸಿ ನರ್ಸಿಂಗ್ ವಿದ್ಯಾರ್ಥಿಗಳಿಗಾಗಿ ಪೋಸ್ಟರ್ ಹಾಗೂ ಮಾದರಿ ಪ್ರದರ್ಶನ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ವಿದ್ಯಾರ್ಥಿಗಳಲ್ಲಿ ಪೋಷಣೆ ಮತ್ತು ಡಯಾಬೀಟೀಸ್ ಕುರಿತು ಜ್ಞಾನ ಹಾಗೂ ಜಾಗೃತಿ ಹೆಚ್ಚಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಇಂತಹ ಚಟುವಟಿಕೆಗಳು ವಿದ್ಯಾರ್ಥಿಗಳಲ್ಲಿ ಸೃಜನಶೀಲತೆ, ಸಂವಹನ ಕೌಶಲ್ಯ ಹಾಗೂ ಪೋಷಣೆಯನ್ನು ಕುರಿತು ಆಳವಾದ ಅರಿವು ಬೆಳೆಸಲು ಸಹಾಯಕವಾಗುತ್ತದೆ. ಮಾಹಿತಿ ಪ್ರಧಾನ ಮತ್ತು ಸಂವಾದಾತ್ಮಕವಾಗಿದ್ದ ಈ ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿ ಸ್ವಯಂಜಾಗೃತಿ ಮೂಡಿಸಿ, ಸಮುದಾಯದಲ್ಲಿ ಉತ್ತಮ ಆರೋಗ್ಯ ಕಾಪಾಡಲು ಪ್ರೇರಣೆಯನ್ನು ನೀಡಿತು. ಇದೇ ಸಂದರ್ಭದಲ್ಲಿ ಶ್ರೀದೇವಿ ವೈದ್ಯಕೀಯ ವಿಭಾಗದ ಆಹಾರ ತಜ್ಞರಾದ ಮರಿಯಾ ಬೇಬಿ, ಶಾಲಿನಿ, ಮೌಲ್ಯ ಹಾಗೂ ಮಧುಮೇಹ ತಜ್ಞರಾದ ಡಾ. ವಿರುಪಾಕ್ಷಪ್ಪ ಹಾಗೂ ವಿವಿಧ ವಿಭಾಗದ ಮುಖ್ಯಸ್ಥರು, ಶುಶ್ರೂಷಕರು, ಬೋಧಕ–ಬೋಧಕೇತರ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

**▪ ವರದಿ: ಎನ್. ಆನಂದ**

# ಕೋವಿಡ್ ಅನಂತರ ಮಹತ್ವ ಪಡೆದುಕೊಂಡ ಫಿಜಿಯೋಥೆರೆಪಿ ಕೋರ್ಸ್

ವೈದ್ಯಕೀಯ ರಂಗದಲ್ಲಿ ಫಿಜಿಯೋಥೆರಪಿ ಆವಶ್ಯಕ ಹಾಗೂ ನಿರ್ಲಕ್ಷಿಸಲಾಗದಂತಹ ಅನಿವಾರ್ಯತೆಯಾಗಿದೆ ಎಂದು ತುಮಕೂರಿನ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ಫಿಜಿಯೋಥೆರಪಿ ಕಾಲೇಜಿನ ಪ್ರಿನ್ಸಿಪಲ್ ಡಾ. ಆನಂದಿ ಹೇಳುತ್ತಾರೆ.

ಈ ಕುರಿತು ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಫಿಜಿಯೋಥೆರಪಿಯ ಮಹತ್ತ್ವ, ಅದು ಬೆಳೆದು ಬಂದ ದಾರಿ, ಕಳೆದ ಎರಡು ದಶಕಗಳಲ್ಲಿ ಪಡೆದುಕೊಂಡಿರುವ ಪ್ರಾಧಾನ್ಯ ಮತ್ತು ಫಿಜಿಯೊಥೆರಪಿ ಕೋರ್ಸ್‌ಗಳಿಗೆ ಬರುತ್ತಿರುವ ಬೇಡಿಕೆ ಮತ್ತಿತರ ಹತ್ತು ಹಲವು ವಿಚಾರಗಳನ್ನು ಮನಮುಟ್ಟುವಂತೆ ವಿವರಿಸಿದ್ದಾರೆ.

ಹಾಗಿದ್ದರೆ ಫಿಜಿಯೋಥೆರಪಿ ಚಿಕಿತ್ಸಾವಿಧಾನ ಎಂದರೆ ಏನು?. ಯಾವುದಕ್ಕೆ ಅಗತ್ಯ, ಯಾವುದಕ್ಕೆ ಅಗತ್ಯವಿಲ್ಲ ಎಂಬುದನ್ನು ಈ ಲೇಖನ ಮಾಲಿಕೆಯಲ್ಲಿ ವಿವರವಾಗಿ ತಿಳಿಯೋಣ. ಹಾಗೆ ನೋಡಿದರೆ ವೈದ್ಯಕೀಯ ಲೋಕದಲ್ಲಿ ಫಿಜಿಯೋಥೆರಪಿ ಹೊಸದೇನೂ ಅಲ್ಲ. ಹೆಚ್ಚು ಕಡಿಮೆ ಸುಮಾರು 100 ವರ್ಷಗಳಿಂದಲೂ ಈ ಚಿಕಿತ್ಸಾಪದ್ಧತಿ ಚಾಲ್ತಿಯಲ್ಲಿದೆ. ಆದರೆ ಅದರ ಬಳಕೆ ಕಳೆದ 15–20 ವರ್ಷಗಳಿಂದ ಭಾರೀ ಪ್ರಮಾಣದಲ್ಲಿ ಹೆಚ್ಚಾಗುತ್ತಿದೆ. ಯಾವುದೇ ಸೋಂಕಿನಿಂದ ಉಂಟಾಗುವ ರೋಗಗಳಿಗೆ ಇದು ಪರಿಹಾರವಲ್ಲ. ಆದರೆ ರೋಗವಾಸಿಯಾದ ಅನಂತರ ನಂತರ ಉಂಟಾಗುವ ಸುಸ್ತು, ಮತ್ತಿತರ ದೈಹಿಕ ದೌರ್ಬಲ್ಯಗಳ ನಿವಾರಣೆಗೆ ಫಿಜಿಯೋಥೆರಪಿ ಅತ್ಯಗತ್ಯವಾಗಿದೆ.

ಸೋಂಕಿನಿಂದ ಬರುವ ಮಲೇರಿಯಾ, ಟೈಫಾಯ್ಡ್ ಕೋವಿಡ್ ಮುಂತಾದ ಕಾಯಿಲೆಗಳಿಗೆ ಖಂಡಿತವಾಗಿಯೂ ಔಷಧೌಪಚಾರ ಬೇಕೇಬೇಕು. ಆದರೆ ಅದರ ನಂತರ ಕಾಣಿಸಿಕೊಳ್ಳುವ ಫಿಟ್‌ನೆಸ್ ಸಮಸ್ಯೆಗಳಿಗೆ ಫಿಜಿಯೋಥೆರಪಿ ಅನಿವಾರ್ಯ. ಇನ್ನು ಒಂದೇ ಮಾತಿನಲ್ಲಿ ಹೇಳಬಹುದಾದರೆ ವೈದ್ಯಕೀಯ ಲೋಕದಲ್ಲಿ ಫಿಜಿಯೋಥೆರಪಿಯನ್ನು



ಕಡೆಗಣಿಸುವಂತಿಲ್ಲ ಎಂಬುದನ್ನು ಅವರು ಒತ್ತಿ ಹೇಳುತ್ತಾರೆ ವಿಶೇಷವಾಗಿ ಮೂಳೆಗೆ ಸಂಬಂಧಪಟ್ಟ ಕತ್ತುನೋವು, ಸೊಂಟನೋವು ಹಾಗೂ ಕೀಲುನೋವುಗಳಿಗೆ ಈ ಚಿಕಿತ್ಸಾವಿಧಾನ ರಾಮಬಾಣ. ಔಷಧ, ಮಾತ್ರೆ, ಇಂಜಕ್ಷನ್‌ಗಳಿಲ್ಲದೆ ಸುಲಭವಾಗಿ ಅವುಗಳ ಉಪಶಮನ ಮಾಡಿಕೊಳ್ಳಬಹುದಾಗಿದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ತುರ್ತು ಚಿಕಿತ್ಸಾಘಟಕದಲ್ಲಿಯೂ ಫಿಜಿಯೋಥೆರಪಿಯ ಅನಿವಾರ್ಯತೆ ಬಂದಿದೆ. ಅದರಲ್ಲಿಯೂ ಕಳೆದ ಐದಾರು ವರ್ಷಗಳಿಂದೀಚೆಗೆ ವಿಶೇಷವಾಗಿ ಕೋವಿಡ್ ಕಾಲಘಟ್ಟದಲ್ಲಿ ಕಾರ್ಡಿಯೋ ರೆಸ್ಪಿರೇಟರಿ ಚಿಕಿತ್ಸೆಗಾಗಿ ಐಸಿಯುನಲ್ಲಿ ಫಿಜಿಯೋಥೆರಪಿಯನ್ನು ಬಳಕೆಮಾಡಿದ್ದು ವೈದ್ಯಕೀಯಲೋಕದಲ್ಲಿ ವಿಶೇಷ. ಇದಕ್ಕೆ ಒಂದು ತಾಜಾ ಉದಾಹರಣೆ ಎಂದರೆ ಕೋವಿಡ್‌ಗೆ ಒಳಗಾಗಿದ್ದ ಹೆಸರಾಂತ ಚಲನಚಿತ್ರ ಹಿನ್ನಲೆ ಗಾಯಕ ದಿ॥ ಎಸ್. ಪಿ. ಬಾಲಸುಬ್ರಹ್ಮಣ್ಯಂ ಅವರಿಗೆ ಐಸಿಯುನಲ್ಲಿಯೇ ಫಿಜಿಯೋಥೆರಪಿ ಚಿಕಿತ್ಸೆಯನ್ನು ನೀಡಲಾಗುತ್ತಿತ್ತು ಎಂಬ ವಿಚಾರ ಮಾಧ್ಯಮದ ಮೂಲಕ ಬೆಳಕಿಗೆ ಬಂದಿತ್ತು.

ಇತ್ತೀಚಿನ ವರ್ಷಗಳಲ್ಲಿ ಜನರ ಜೀವನಶೈಲಿಯಿಂದಾಗಿ ದೇಶಾದ್ಯಂತ ಫಿಜಿಯೋಥೆರಪಿ ಕೋರ್ಸ್‌ಗಳಿಗೆ ಹೆಚ್ಚಿನ ಬೇಡಿಕೆ ಸೃಷ್ಟಿಯಾಗಿದ್ದು, ಇದರ ಮಹತ್ತ್ವವನ್ನು ಅರಿತ 'ರಾಷ್ಟ್ರೀಯ ಫಿಜಿಯೋಥೆರಪಿ ಪರಿಷತ್ತು' ಈ ಕೋರ್ಸ್‌ಗಳ ಪ್ರವೇಶಕ್ಕೆ ನೀಟ್ ಪರೀಕ್ಷೆಯನ್ನು ಮುಂದಿನ ವರ್ಷದಿಂದ ಕಡ್ಡಾಯಗೊಳಿಸಿದೆ. ಮೇಲಾಗಿ ಈ ಕೋರ್ಸನ್ನು ಮುಗಿಸಿದವರಿಗೆ ಡಾಕ್ಟರ್ ಎಂಬ ಸರ್ಟಿಫಿಕೇಟನ್ನು ನೀಡಲಾಗುತ್ತದೆ. ಇದೊಂದು ಗಮನಾರ್ಹ ಸಂಗತಿಯಾಗಿದೆ. ಮುಂದಿನ ವರ್ಷದಿಂದ ಫಿಜಿಯೋಥೆರಪಿ ಅಂಡರ್–ಗ್ರಾಜುಯೇಟ್ ಕೋರ್ಸ್ ಅವಧಿ ಐದು ವರ್ಷವಾಗಲಿದ್ದು, ನಾಲ್ಕು ವರ್ಷಗಳ ಕಲಿಕೆಯ ಅನಂತರ ಒಂದು ವರ್ಷ ಇಂಟರ್ನ್‌ಶಿಪ್ ಮಾಡಬೇಕಾಗಿದೆ. ಅದೇ ರೀತಿ ಪಿಜಿ ವಿಭಾಗದಲ್ಲೂ ಆರ್ಥೋಪೆಡಿಕ್ ಫಿಜಿಯೋಥೆರಪಿ, ನ್ಯೂರೋ ಫಿಜಿಯೋಥೆರಪಿ, ಕಾರ್ಡಿಯೋ ರೆಸ್ಪಿರೇಟರಿ, ಫಿಜಿಯೋಥೆರಪಿ, ಪಿಡಿಯಾಟ್ರಿಕ್ ಫಿಜಿಯೋಥೆರಪಿ, ಕಮ್ಯುನಿಟಿ ಫಿಜಿಯೋಥೆರಪಿ, ಜೀರಿಯಾಟಿಕ್ ಫಿಜಿಯೋಥೆರಪಿ, ಬಯೋಮೆಕಾನಿಕ್ ಫಿಜಿಯೋಥೆರಪಿಯಂತಹ ಹಲವು ಕೋರ್ಸ್‌ಗಳಿವೆ. ಫಿಜಿಯೋಥೆರಪಿ ಪದವಿ ಕೋರ್ಸ್ ಅನಂತರ ಸ್ನಾತಕೋತ್ತರ ಕೋರ್ಸ್‌ಗಳಿಗೆ ಪ್ರವೇಶವನ್ನು ಪಡೆಯಬಹುದಾಗಿದೆ.

ಯಾವುದೇ ಕಾಯಿಲೆ ಬಂದರೂ ರೋಗಿ ಮೊದಲಿನಂತೆ ಫಿಟ್‌ನೆಸ್ ಕಾಯ್ದುಕೊಂಡು ಸಹಜ ಸ್ಥಿತಿಗೆ ಬರಲು ಫಿಜಿಯೋಥೆರಪಿ ಪ್ರಮುಖ ಚಿಕಿತ್ಸಾ ವಿಧಾನವಾಗಿದೆ. ಪಾರ್ಕಿನ್ಸನ್ ನರ ಮತ್ತು ಮೆದುಳಿಗೆ ಸಂಬಂಧಪಟ್ಟ ಕಾಯಿಲೆಯಾಗಿದ್ದು ಈ ಸಮಸ್ಯೆಯಿಂದ ಬಳಲುತ್ತಿರುವವರು ಆರಂಭದಲ್ಲೇ ನಿಗದಿತ ಔಷಧಿಯ ಜೊತೆಗೆ ಫಿಜಿಯೋಥೆರಪಿ ಪಡೆದುಕೊಂಡರೆ ಸಮಸ್ಯೆಯಿಂದ ಹೊರಬಂದು ಎಲ್ಲರಂತೆ ಬದುಕಬಹುದು. ಅಷ್ಟೇ ಅಲ್ಲ, ಅವರು ದೀರ್ಘಾವಧಿಯವರೆಗೂ ಸದೃಢರಾಗಿ ಜೀವಿಸಬಹುದು. ಬಹುತೇಕ ಪ್ರಕರಣಗಳಲ್ಲಿ ರೋಗಿಗಳು ಮೂರನೆಯ ಹಂತ ಅಥವಾ ನಾಲ್ಕನೆಯ ಹಂತಕ್ಕೆ ಬಂದಾಗ ಫಿಜಿಯೋಥೆರಪಿಗಾಗಿ ಬರುತ್ತಾರೆ. ಅಂತಹವರಿಗೆ ಚಿಕಿತ್ಸೆ ಕೊಟ್ಟು ಉಪಶಮನ ಮಾಡಲು ಹೆಚ್ಚಿನ ಸಮಯ ಬೇಕಾಗುತ್ತದೆ. ಆದರೆ ಅವರು ಆರಂಭದಲ್ಲಿಯೇ ಫಿಜಿಯೋಥೆರಪಿ ಚಿಕಿತ್ಸೆ ಪಡೆದುಕೊಂಡರೆ ಸುಗಮ ಮತ್ತು ಸಹಜ ಆರೋಗ್ಯ ಜೀವನ ಸಾಧ್ಯ. ಹೀಗಾಗಿ ಬದುಕಿನ ಎಲ್ಲ ಹಂತಗಳಲ್ಲಿ ಫಿಜಿಯೋಥೆರಪಿ ಅತಿ ಮುಖ್ಯವಾಗಿದೆ. ಹೀಗಾಗಿ, ಇಂದಿನ ದಿನಗಳಲ್ಲಿ ಫಿಸಿಯೋಥೆರಫಿ ಇಲ್ಲದ ಅಸ್ಪತ್ರೆಯನ್ನು ಊಹೆ ಮಾಡಲಿಕ್ಕೂ ಸಾಧ್ಯವಿಲ್ಲ ಎಂಬುದು ಡಾ. ಆನಂದಿ ಅವರ ಸ್ಪಷ್ಟವಾದ ಅಭಿಪ್ರಾಯ.

**ಕಾಲೇಜಿನಲ್ಲಿ ಲಭ್ಯವಿರುವ ಕೋರ್ಸ್‌ಗಳು:**

ಫಿಜಿಯೋಥೆರಪಿ ಪದವಿ ಕೋರ್ಸ್ 2025ನೆಯ ಶೈಕ್ಷಣಿಕ ಸಾಲಿನವರೆಗೆ ನಾಲ್ಕೂವರೆ ವರ್ಷಗಳ ಅವಧಿಯ ಕೋರ್ಸ್ ಆಗಿತ್ತು. ಇದರಲ್ಲಿ ನಾಲ್ಕು ವರ್ಷಗಳ ಶೈಕ್ಷಣಿಕ ಅವಧಿಯಾದರೆ ಉಳಿದ ಆರು ತಿಂಗಳ ಇಂಟರ್ನ್‌ಶಿಪ್‌ಗೆ ಮೀಸಲಾಗಿರುತ್ತಿತ್ತು. 2026ನೆಯ ಸಾಲಿನಿಂದ ಈ ಕೋರ್ಸ್‌ನ ಅವಧಿಯನ್ನು ಐದು ವರ್ಷಗಳಿಗೆ ನಿಗದಿಗೊಳಿಸಲಾಗಿದೆ. ಇದರಲ್ಲಿ ಶೈಕ್ಷಣಿಕ ಅವಧಿಯು ಮುಂಚೆ ಇದ್ದಂತೆಯೇ ನಾಲ್ಕು ವರ್ಷಗಳಾಗಿದ್ದರೆ ಇಂಟರ್ನ್‌ಶಿಪ್ ಅವಧಿಯನ್ನು ಆರು ತಿಂಗಳಿಂದ ಒಂದು ವರ್ಷಕ್ಕೆ ಹೆಚ್ಚಿಸಲಾಗಿದೆ. ಅಲ್ಲದೆ, 2026ರಿಂದ ಅನ್ವಯವಾಗುವಂತೆ ಈ ಕೋರ್ಸಿಗೆ ಸೀಟು ಪಡೆಯಲು ನೀಟ್ ಪರೀಕ್ಷೆ ಮೂಲಕ ಅರ್ಹತೆ ಹೊಂದುವುದನ್ನು ಕಡ್ಡಾಯಗೊಳಿಸಲಾಗಿದೆ. ರಾಜ್ಯದ ಅತ್ಯುತ್ತಮ ಫಿಜಿಯೋಥೆರಪಿ ಕಾಲೇಜುಗಳಲ್ಲಿ ಒಂದಾಗಿರುವ ಶ್ರೀದೇವಿ ಫಿಜಿಯೋಥೆರಪಿ ಕಾಲೇಜಿನಲ್ಲಿ ಪದವಿಯ ಅನಂತರದ ಎರಡು ವರ್ಷಗಳ ಅವಧಿಯ ಮಾಸ್ಟರ್ ಆಫ್ ಫಿಜಿಯೋಥೆರಪಿ ಕೋರ್ಸ್ ವ್ಯಾಸಂಗಕ್ಕೂ ಅವಕಾಶವಿದೆ. ನರಸಂಬಂಧಿ ವಿಜ್ಞಾನಗಳು (ನ್ಯೂರಾಲಾಜಿಕಲ್ ಸೈನ್ಸಸ್), ಮಸ್ಕ್ಯುಲೊಸ್ಕೆಲಿಟಲ್ ಸೈನ್ಸಸ್ ಹಾಗೂ ಕ್ರೀಡಾ ವಿಜ್ಞಾನ (ಸ್ಪೋರ್ಟ್ಸ್ ಸೈನ್ಸಸ್) ಎಂಬ ಮೂರು ವಿಶೇಷ ತಜ್ಞತೆಯ ಕೋರ್ಸ್ ಲಭ್ಯವಿದೆ.

■ ನಿರೂಪಣೆ: ಕೆ. ಎಸ್. ರಾಜಮನ್ನಾರ್

# ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಆಯೋಗದ ಅಧ್ಯಕ್ಷರ ಭೇಟಿ

ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಆಯೋಗದ ಅಧ್ಯಕ್ಷರಾದ ಡಾ. ಎಲ್. ಮೂರ್ತಿ ಅವರು ಶ್ರೀದೇವಿ ಶಿಕ್ಷಣ ಸಂಸ್ಥೆಗೆ ಭೇಟಿ ನೀಡಿ ವಿವಿಧ ವಿಭಾಗಗಳ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ಈ ಸಂದರ್ಭದಲ್ಲಿ ಶ್ರೀದೇವಿ ಇಂಜಿನಿಯರಿಂಗ್ ಕಂಪ್ಯೂಟರ್ ಸೈನ್ಸ್ ವಿಭಾಗದ ಅಂತಿಮ ವರ್ಷದ ವಿದ್ಯಾರ್ಥಿಗಳೊಂದಿಗೆ ವಿಶೇಷ ಮಾತುಕತೆ ನಡೆಸಿದ ಅವರು, ಉನ್ನತ ಶಿಕ್ಷಣ, ಉದ್ಯೋಗಾವಕಾಶಗಳು ಹಾಗೂ ವಿದ್ಯಾರ್ಥಿವೇತನ ಪಡೆಯುವ ವಿಧಾನಗಳ ಬಗ್ಗೆ ಮಾಹಿತಿಯನ್ನು ಪಡೆದರು. 'ಪರಿಶಿಷ್ಟ ಜಾತಿ ಮತ್ತು ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಗಳು ಸಿಗುತ್ತಿವೆಯಾ?' 'ಅರ್ಜಿಗಳನ್ನು ಸರಿಯಾಗಿ ಹಾಕುತ್ತಿದ್ದೀರಾ?" ಎಂದು ವಿದ್ಯಾರ್ಥಿಗಳನ್ನು ವಿಚಾರಿಸಿದರು. ಸರಿಯಾದ ದಾಖಲೆಗಳೊಂದಿಗೆ ಸಮಯಕ್ಕೆ ಸರಿಯಾಗಿ ಅರ್ಜಿ ಸಲ್ಲಿಸುವಂತೆ ಸೂಚಿಸಿದರು. ವಿದ್ಯಾರ್ಥಿಗಳು ತಮ್ಮ ಸಂಶಯಗಳನ್ನು ಅವರಿಗೆ ತಿಳಿಸಿ ಅವರಿಂದ ಸ್ಪಷ್ಟನೆಯನ್ನು ಪಡೆದರು.

ಅನಂತರ ಅವರು ಶ್ರೀದೇವಿ ಮೆಡಿಕಲ್ ಕಾಲೇಜಿನ ಸ್ಕಿಲ್ ಲ್ಯಾಬ್ ಹಾಗೂ ಅನಾಟಮಿ ವಿಭಾಗಕ್ಕೆ ಭೇಟಿ ನೀಡಿ ಅಲ್ಲಿರುವ ಸೌಲಭ್ಯಗಳನ್ನು ಪರಿಶೀಲಿಸಿ ಮೆಡಿಕಲ್ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು. ವೈದ್ಯಕೀಯ ಕ್ಷೇತ್ರದಲ್ಲಿ ಕೌಶಲಾಭಿವೃದ್ಧಿಯ ಅಗತ್ಯವನ್ನು ವಿವರಿಸಿದರು.

ಆಯೋಗದ ಅಧ್ಯಕ್ಷರಾದ ಡಾ. ಎಲ್.



ಮೂರ್ತಿ ಅವರು ಶ್ರೀದೇವಿ ಸಂಸ್ಥೆಯ ಅಧ್ಯಕ್ಷರಾದ ಡಾ. ಎಂ. ಅರ್ ಹುಲಿನಾಯ್ಕರ್ ಅವರ ನೇತೃತ್ವದಲ್ಲಿ ಶ್ರೀದೇವಿ ಶಿಕ್ಷಣ ಸಂಸ್ಥೆ ಉತ್ತಮವಾಗಿ ಬೆಳೆಯುತ್ತಿರುವುದನ್ನು ಗಮನಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಜೊತೆಗೆ ಸಂಸ್ಥೆಯ ಪ್ರಕಟಣೆಯಾದ 'ಶ್ರೀದೇವಿ ಅಂತರಂಗ' ಪತ್ರಿಕೆಯು ಉತ್ತಮವಾಗಿ ಹೊರಬರುತ್ತಿದ್ದು, ಅದರಲ್ಲಿ ಪ್ರಕಟವಾಗುತ್ತಿರುವ ವಿಷಯ ಹಾಗೂ ಮುದ್ರಣವನ್ನು ಪ್ರಶಂಸೆ ಮಾಡಿದರು. ಸಂಸ್ಥೆಯಲ್ಲಿರುವ ಶೈಕ್ಷಣಿಕ ವಾತಾವರಣ, ಮೂಲಸೌಕರ್ಯ ಹಾಗೂ ತರಬೇತಿ ವ್ಯವಸ್ಥೆಯನ್ನು ಮೆಚ್ಚಿದ ಅವರು, ವಿದ್ಯಾರ್ಥಿಗಳಿಗೆ 'ಶ್ರದ್ಧೆ, ಪರಿಶ್ರಮ ಮತ್ತು ಗುರಿ ಸಾಧನೆಗೆ ಒತ್ತು ನೀಡಬೇಕು' ಎಂಬ ಸಲಹೆಯನ್ನು ನೀಡಿದರು. ಡಾ. ಎಲ್. ಮೂರ್ತಿ ಅವರನ್ನು ಶ್ರೀದೇವಿ ಶಿಕ್ಷಣ ಸಂಸ್ಥೆ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್ ಅವರು ಸನ್ಮಾನಿಸಿ, ಡಾ. ಎಲ್. ಮೂರ್ತಿ ಅವರು ಸಂವೇದನಾಶೀಲ ವೈದ್ಯರು ಮತ್ತು ಸಾಮಾಜಿಕ ಬದ್ಧತೆಯುಳ್ಳ ವ್ಯಕ್ತಿ. ಅವರಿಂದ ಶೋಷಿತ ಸಮಾಜಕ್ಕೆ ನ್ಯಾಯ ದೊರೆಯುತ್ತದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಅಧ್ಯಕ್ಷರ ಜೊತೆಗೆ ಆಯೋಗದ ಕಾರ್ಯದರ್ಶಿ ಡಾ.ಹೆಚ್. ಎಸ್. ಶಿವರಾಮ್ ಸಹ ಶ್ರೀದೇವಿ ಸಂಸ್ಥೆಗೆ ಭೇಟಿ ನೀಡಿದ್ದರು.


■ ವರದಿ: ಎನ್. ಆನಂದ

## ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಕಾರ್ಯಾಗಾರ

"ವಿದ್ಯಾರ್ಥಿಗಳು ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು. ಅವರು ಆತ್ಮವಿಶ್ವಾಸ, ಕೌಶಲ, ಶ್ರದ್ಧೆ, ಸಮಯಪ್ರಜ್ಞೆ ಮೂಲಕ ಯಶಸ್ಸನ್ನು ಸಾಧಿಸಬಹುದು. ಉತ್ತಮ ಫಲಿತಾಂಶ ಪಡೆದವರು ಸುಲಭವಾಗಿ ಉದ್ಯೋಗ ಪಡೆಯುತ್ತಾರೆ. ಶಾಲಾ ಜೀವನದಿಂದಲೇ ವಿದ್ಯಾರ್ಥಿಗಳು ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಬೇಕು. ತುಮಕೂರು ನಗರದಲ್ಲಿ ಶೇಕಡ 10ರಷ್ಟು ವಿದ್ಯಾರ್ಥಿಗಳಾದರೂ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 625ಕ್ಕೆ 625 ಅಂಕಗಳಿಸುತ್ತಾರೆ" ಎಂದು ತುಮಕೂರಿನ ಕ್ಷೇತ್ರ ಶಿಕ್ಷಣಾಧಿಕಾರಿಯಾದ ಎಂ. ಹನುಮಂತಪ್ಪರವರು ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ಪರೀಕ್ಷಾ ಮಾರ್ಗದರ್ಶನ ಕುರಿತು ಒಂದು ದಿನದ ಕಾರ್ಯಾಗಾರದ ಉದ್ಘಾಟನಾ ಭಾಷಣದಲ್ಲಿ ಹೇಳಿದರು.

ಶ್ರೀರಮಣ ಮಹರ್ಷಿ ಎಜುಕೇಷನ್ ಟ್ರಸ್ಟ್ ಮತ್ತು ಶ್ರೀದೇವಿ ಪಿ.ಯು. ಕಾಲೇಜಿನ ಸಹಯೋಗದಲ್ಲಿ ಒಂದು ದಿನದ ಈ ಕಾರ್ಯಾಗಾರವನ್ನು ಫೆಬ್ರವರಿ 7ರಂದು ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಾಗಾಂದಲ್ಲಿ ತುಮಕೂರು ಜಿಲ್ಲೆಯ ವಿವಿಧ ಶಾಲೆಗಳಿಂದ ಸುಮಾರು 500 ಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಅಧ್ಯಕ್ಷತೆ ವಹಿಸಿದ್ದ ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್. ಪಾಟೀಲ್ ಅವರು "ವಿದ್ಯಾರ್ಥಿಗಳು ಇಂತಹ ಕಾರ್ಯಾಗಾರಗಳಿಂದ ಸದುಪಯೋಗವನ್ನು ಪಡೆದುಕೊಳ್ಳಬೇಕು. ಉತ್ತಮ ಅಂಕಗಳನ್ನು ಪಡೆದುಕೊಂಡು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉನ್ನತ ಮಟ್ಟದಲ್ಲಿ ತೇರ್ಗಡೆ ಹೊಂದಬೇಕು" ಎಂದು ಆಶಿಸಿದರು.

**ನೆನಪಿನಲ್ಲಿಡಬೇಕಾದ ಮಾತು**



“ಬದುಕನ್ನು ಅರ್ಥ ಮಾಡಿಕೊಳ್ಳಲಾರದ ಜನರು ಮೂಢನಂಬಿಕೆಗಳ ಹಿಂದೆ ಬಿಚ್ಚಿಟ್ಟುಕೊಳ್ಳುತ್ತಾರೆ.

– ಲಿಯೋ ಟಾಲ್‌ಸ್ಟಾಯ್
ರಷ್ಯನ್ ಸಾಹಿತಿ ಹಾಗೂ ಚಿಂತಕರು

# ನೀಟ್ ಪರೀಕ್ಷೆ

## ಆತ್ಮವಿಶ್ವಾಸ ಹೆಚ್ಚಿಸಿದ ಜಾಗೃತಿ ಶಿಬಿರ




ಫೆಬ್ರವರಿ 14ರಂದು ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಅಂಗಳದಲ್ಲಿ ವಿದ್ಯಾರ್ಥಿಗಳು, ಪೋಷಕರು, ಅಧ್ಯಾಪಕರು, ಪ್ರಾಂಶುಪಾಲರ ಸಮಾಗಮ. ಒಂದು ರೀತಿಯಲ್ಲಿ ಹಬ್ಬದ ಸಡಗರ ಸಂಭ್ರಮ ಮಾಡಿತ್ತು. ಜಿಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖೆ ಹಾಗೂ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಜಂಟಿ ಸಹಯೋಗದಲ್ಲಿ ಏರ್ಪಡಿಸಿದ್ದ ‘ನೀಟ್ ಜಾಗೃತಿ ಸಂವಾದ’ ಕಾರ್ಯಾಗಾರ 2026ದಲ್ಲಿ ಭಾಗವಹಿಸಲು ತುಮಕೂರು ಜಿಲ್ಲೆಯ ಬೇರೆ, ಬೇರೆ ತಾಲೂಕುಗಳಿಂದ ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು, ಕಾಲೇಜಿನ ಪ್ರಾಂಶುಪಾಲರು, ಅಧ್ಯಾಪಕರು ಮತ್ತು ಪೋಷಕರು ಆಗಮಿಸಿದ್ದರು.

ದ್ವಿತೀಯ ಪಿಯುಸಿ ಪರೀಕ್ಷೆ ಹತ್ತಿರವಾಗುತ್ತಿದೆ. ಅದಾದ ಬಳಿಕ ನೀಟ್ ಮತ್ತು ಸಿಇಟಿ ಪರೀಕ್ಷೆಗಳು ವಿದ್ಯಾರ್ಥಿ ಮತ್ತು ಪೋಷಕರ ಪಾಲಿಗೆ ಅತ್ಯಂತ ಮಹತ್ತ್ವದ ಘಟ್ಟವಾಗಿರುತ್ತದೆ. ಹೀಗಾಗಿ ಪಿಯುಸಿಯ ಅನಂತರ ಮುಂದಿನ ಭವಿಷ್ಯವನ್ನು ಹೇಗೆ ಕಂಡುಕೊಳ್ಳಬೇಕು, ನೀಟ್ ಪರೀಕ್ಷೆಗೆ ಹೇಗೆ ಅರ್ಜಿಯನ್ನು ಹೇಗೆ ಸಲ್ಲಿಸಬೇಕು. ಯಾವುದರ ಬಗೆಗೆ ಎಚ್ಚರಿಕೆ ವಹಿಸಬೇಕು. ಯಾವ ಯಾವ ದಾಖಲೆಗಳನ್ನು ಸಿದ್ಧಪಡಿಸಿಕೊಳ್ಳಬೇಕು – ಎಂಬುದರ ಬಗ್ಗೆ ಜಾಗೃತಿ ಕಾರ್ಯಾಗಾರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿದ್ದ ನೀಟ್ ತಜ್ಞ ಹಾಗೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ನಿವೃತ್ತ ಅಧಿಕಾರಿ ಎ.ಎಸ್. ರವಿ ಸುಮಾರು ಎರಡು ಗಂಟೆಗಳ ಕಾಲ ಮಾತನಾಡಿ ವಿದ್ಯಾರ್ಥಿಗಳ ಗೊಂದಲ, ಅನುಮಾನಗಳನ್ನು ಬಗೆಹರಿಸಿ ಅವರಲ್ಲಿ ಆತ್ಮವಿಶ್ವಾಸ ಮೂಡುವಂತೆ ಮಾಡಿದರು.

“ಇದೊಂದು ಅರ್ಥಪೂರ್ಣ ಶೈಕ್ಷಣಿಕ ಸಂವಾದ ಕಾರ್ಯಾಗಾರವಾಗಿದ್ದು, ಗ್ರಾಮೀಣ ಪ್ರದೇಶದ ಮಕ್ಕಳು ತಮ್ಮದಲ್ಲದ ತಪ್ಪಿಗಾಗಿ ಉನ್ನತ ಶಿಕ್ಷಣದಿಂದ ವಂಚಿತರಾಗಬಾರದು. ಬಡವರ ಮನೆಯ ಮಕ್ಕಳು ವೈದ್ಯರು, ಇಂಜಿನಿಯರ್‌ಗಳು ಆಗುವ ಕನಸು ನುಚ್ಚುನೂರಾಗಬಾರದು ಎಂಬ ಉದ್ದೇಶದಿಂದ ಶ್ರೀದೇವಿ ಎಂಜಿನಿಯರಿಂಗ್ ಕಾಲೇಜು ಮತ್ತು ಪದವಿಪೂರ್ವ ಶಿಕ್ಷಣ ಇಲಾಖೆ ಜಂಟಿ ಸಹಯೋಗದಲ್ಲಿ ಇದನ್ನು ಆಯೋಜನೆ ಮಾಡಿದ್ದವು. ನಿರೀಕ್ಷೆಗೂ ಮೀರಿ ಜಿಲ್ಲೆಯ ವಿವಿಧ ಕಾಲೇಜುಗಳಿಂದ ಪ್ರಾಂಶುಪಾಲರು, ವಿದ್ಯಾರ್ಥಿಗಳು ಮತ್ತು ಪೋಷಕರು ಈ ಸಂವಾದ ಕಾರ್ಯಾಗಾರದಲ್ಲಿ ಭಾಗಿಯಾಗಿದ್ದರು. ಅವರುಗಳು ಕೋರ್ಸ್ ಮತ್ತು ಕಾಲೇಜು ಬಗ್ಗೆ ಮಾಹಿತಿ ಪಡೆದುಕೊಂಡರು..

‘ಕೌನ್ಸಿಲಿಂಗ್ ಮುಗಿಯುವವರೆಗೂ ವಿದ್ಯಾರ್ಥಿಗಳು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಮತ್ತು ಎಂಸಿಸಿ (ಮೆಡಿಕಲ್ ಕೌನ್ಸಿಲ್ ಕಮಿಟಿ) ಜಾಲತಾಣದಲ್ಲಿ ಬರುವ ವಿಚಾರಗಳನ್ನು ಓದಿ ಅರ್ಥ ಮಾಡಿಕೊಳ್ಳಬೇಕು. ಇಂಜಿನಿಯರಿಂಗ್, ಮೆಡಿಕಲ್ ಸೀಟು ಆಯ್ಕೆಯಲ್ಲಿ ಭಾಷಾ ಮತ್ತು ಧಾರ್ಮಿಕ ಅಲ್ಪಸಂಖ್ಯಾತರು ಸೀಟು ಪಡೆಯುವ ಸೌಲಭ್ಯವಿದೆ. ಸಂವಿಧಾನ ಬದ್ಧ ಮೀಸಲಾತಿ, ವಿಶೇಷ ಮೀಸಲಾತಿ, ಸ್ಥಳೀಯ ಮೀಸಲಾತಿ, ಹೈದರಾಬಾದ್ ಕರ್ನಾಟಕ ಹಿಂದುಳಿದ ಪ್ರದೇಶದ ಮೀಸಲಾತಿ (6 ಜಿಲ್ಲೆಗಳಿಗೆ ಮಾತ್ರ ಸೀಮಿತ) ಇವುಗಳ ಸೌಲಭ್ಯ ಪಡೆದು ಸೀಟುಗಳನ್ನು ಪಡೆಯುವ ಅವಕಾಶಗಳಿವೆ. ಸೂಪರ್ ನ್ಯೂಮರಿ ಖೋಟಾದಲ್ಲಿ ಶೇಕಡ 5ರಷ್ಟು ಸೀಟು ಮೆಡಿಕಲ್ ಮತ್ತು ಇಂಜಿನೀಯರಿಂಗ್ ಸೀಟು ಪಡೆಯಲು ವಾರ್ಷಿಕ ಆದಾಯ ಮತ್ತು ಮೆರಿಟ್ ಮಾನದಂಡವಾಗಿರುತ್ತದೆ. ಸಿಇಟಿ ಮಟ್ಟದಲ್ಲಿ ಎನ್‌ಸಿಸಿ ಮತ್ತು ಕ್ರೀಡಾ ಖೋಟಾದಲ್ಲಿಯೂ ಸೀಟು ಪಡೆಯುವ ಅವಕಾಶವಿರುತ್ತದೆ.

“ಉನ್ನತ ವ್ಯಾಸಂಗ ಮುಂದುವರಿಸಲು ಹಣಕಾಸಿನ ಅಡಚಣೆ ಇರುವುದಿಲ್ಲ, ಬ್ಯಾಂಕುಗಳು ಶೈಕ್ಷಣಿಕ ಸಾಲ ಕೊಡುತ್ತವೆ. ಸರ್ಕಾರವು ಪ್ರತಿಭಾವಂತ ವಿದ್ಯಾರ್ಥಿಗಳ ಶಿಕ್ಷಣ ಮುಂದುವರಿಸಲು ಸಹಾಯ ಮಾಡುತ್ತದೆ. ಇದರ ಜೊತೆಗೆ ಸಿಎಸ್‌ಆರ್ ನಿಧಿಯ ಪ್ರಾಯೋಜಿತ ಕಾರ್ಯಕ್ರಮಗಳಿಂದ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಮುಂದುವರಿಸಲು ಬಹಳಷ್ಟು ಅವಕಾಶಗಳಿವೆ” ಎಂದು ನೀಟ್ ತಜ್ಞರಾದ ರವಿ ಅವರು ಅಭಿಪ್ರಾಯಪಟ್ಟರು

### ಶ್ರೀದೇವಿ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಗೆ ಮೆಚ್ಚುಗೆ

ಇದಕ್ಕೂ ಮುನ್ನ ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಡಾ. ಬಾಲಗುರುಮೂರ್ತಿ ಮಾತನಾಡಿ “ಗ್ರಾಮೀಣ ಪ್ರದೇಶದ ಮಕ್ಕಳಿಗೆ ಸಿಇಟಿ ಮತ್ತು ನೀಟ್ ಪರೀಕ್ಷೆ ಎದುರಿಸಲು ಇಂತಹ ಸಂವಾದ ಕಾರ್ಯಕ್ರಮ ಅಗತ್ಯವಿತ್ತು. ಇದರ ಸೌಲಭ್ಯವನ್ನು ತುಮಕೂರು ಜಿಲ್ಲೆಯ ಎಲ್ಲ ಬಡವರ, ಗ್ರಾಮಾಂತರದ ಮಕ್ಕಳು ಪಡೆಯಬೇಕು. ಸಂವಾದವನ್ನು ವ್ಯವಸ್ಥೆ ಮಾಡಲು ನಮ್ಮ ಇಲಾಖೆಯ ಜೊತೆ ಕೈ ಜೋಡಿಸಿದ ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯನ್ನು ಅಭಿನಂದಿಸುತ್ತೇನೆ” ಎಂದರು.



### 700ಕ್ಕೂ ಹೆಚ್ಚು ಮೆಡಿಕಲ್ ಕಾಲೇಜು

ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್ ಅವರು “ಸ್ವಾತಂತ್ರ್ಯಾನಂತರ ದೇಶದ ಸಾಕ್ಷರತೆಯಲ್ಲಿ ಬಹಳಷ್ಟು ಸುಧಾರಣೆಯಾಗಿದೆ. ಭಾರತ ವಿಶ್ವದ ನಾಲ್ಕನೇ ಆರ್ಥಿಕ ಬಲಿಷ್ಠ ರಾಷ್ಟ್ರವಾಗಿ ಹೊರಹೊಮ್ಮುವುದರಲ್ಲಿ ದೇಶದ ಶಿಕ್ಷಣ ಸಂಸ್ಥೆಗಳ ಕೊಡುಗೆ ಮಹತ್ತರವಾಗಿದೆ. ದೇಶದಲ್ಲಿ ಇಂದು 700ಕ್ಕೂ ಹೆಚ್ಚು ಮೆಡಿಕಲ್ ಕಾಲೇಜು ಹಾಗೂ ಸಾವಿರಕ್ಕೂ ಹೆಚ್ಚು ಇಂಜಿನಿಯರಿಂಗ್ ಕಾಲೇಜುಗಳಿವೆ. ಅದೇ ರೀತಿ ಕೋರ್ಸ್‌ಗಳ ಸಂಖ್ಯೆಯೂ ಹೆಚ್ಚಾಗುತ್ತಿದೆ. ಜೊತೆಗೆ ಅವಕಾಶಗಳು ಸಹ ಹೇರಳವಾಗಿ ದೊರೆಯುತ್ತಿವೆ. ಅದನ್ನು ಯುವಜನತೆ ಸದುಪಯೋಗ ಮಾಡಿಕೊಳ್ಳಬೇಕು” ಎಂದರು.

ಶ್ರೀದೇವಿ ಇಂಜಿನಿಯರಿಂಗ್ ಕಾಲೇಜು ಪ್ರಾಂಶುಪಾಲ ಡಾ.ನರೇಂದ್ರ ವಿಶ್ವನಾಥ್ ಅವರು “ಇಂತಹ ಕಾರ್ಯಕ್ರಮ ನಮ್ಮ ಕ್ಯಾಂಪಸ್‌ನಲ್ಲಿ ಇನ್ನು ಮುಂದೆ ನಿರಂತರವಾಗಿ ನಡೆಯುತ್ತದೆ. ನೀಟ್ ವಿದ್ಯಾರ್ಥಿಗಳಿಗಾಗಿ ಕಾಲೇಜಿನಲ್ಲಿ ಹೆಲ್ಪ್‌ಡೆಸ್ಕ್ ಆರಂಭಿಸಲಾಗಿದೆ. ವಿದ್ಯಾರ್ಥಿಗಳು ಯಾವಾಗ ಬೇಕಾದರೂ ಬಂದು ಇದರ ಉಪಯೋಗವನ್ನು ಪಡೆಯಬಹುದು. ನೀಟ್ ಮತ್ತು ಸಿಇಟಿ ಪರೀಕ್ಷೆ ಮುಗಿಯುವವರೆಗೂ ಮತ್ತು ಮುಗಿದ ಅನಂತರವೂ ಆಪ್ಷನ್ ಎಂಟ್ರಿ ಹಾಗೂ ಸೀಟು ಆಯ್ಕೆಯವರೆಗೂ ಈ ಸೌಲಭ್ಯವಿರುತ್ತದೆ” ಎಂದರು.

■ ವರದಿ: ಕೆ. ಎಸ್. ರಾಜಮನ್ನಾರ್



ಪತ್ರಿಕಾಗೋಷ್ಠಿಯಲ್ಲಿ ಶ್ರೀದೇವಿ ಸಂಸ್ಥೆಯ ಎಂ.ಎಸ್. ಪಾಟೀಲ್, ಶ್ರೀಮತಿ ಅಂಬಿಕಾ ಹುಲಿನಾಯ್ಕರ್, ಡಾ. ಲಾವಣ್ಯ, ಡಾ. ನರೇಂದ್ರ ವಿಶ್ವನಾಥ್, ಡಾ. ಎನ್. ಚಂದ್ರಶೇಖರ್, ಡಾ. ಕೆ.ಎಸ್. ರಾಮಕೃಷ್ಣ, ಪ್ರೊ. ಸಿ. ಅಜಯ್, ಡಾ. ಎಂ.ಸಿ. ಕೃಷ್ಣ, ಮತ್ತು ಡಾ. ಸಿ.ಪಿ. ಚಂದ್ರಪ್ಪ ಅವರುಗಳು ಉಪಸ್ಥಿತರಿದ್ದರು.

## ನೀಟ್ ಜಾಗೃತಿ ಕಾರ್ಯಾಗಾರ

“ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆ ಇದೇ ಫೆಬ್ರವರಿ 14ರಂದು ಸಾರ್ವಜನಿಕ ಶಾಲಾ ಶಿಕ್ಷಣ ಇಲಾಖೆಯ ಸಹಯೋಗದಲ್ಲಿ ನೀಟ್ ಕುರಿತ ಒಂದು ಜಾಗೃತಿ ಕಾರ್ಯಾಗಾರವನ್ನು ಶ್ರೀದೇವಿ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಪಿಯು ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದೆ. ದ್ವಿತೀಯ ಪಿಯುಸಿ ಓದುತ್ತಿರುವ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ಮೇ. 3ರಂದು ಎನ್.ಟಿ.ಎ.ನಿಂದ ನೀಟ್ ಪರೀಕ್ಷೆ ನಡೆಯುತ್ತದೆ. ಪರೀಕ್ಷೆ ತೆಗದುಕೊಳ್ಳುವ ವಿಧಾನ, ಪರೀಕ್ಷೆಗಾಗಿ ತಯಾರಿ, ಪ್ರಶ್ನೆಪತ್ರಿಕೆಗಳ ಮಾದರಿ, ಉತ್ತರ ನೀಡುವ ವಿಧಾನ ಸೇರಿದಂತೆ ನೀಟ್‌ಗೆ ಸಂಬಂಧಿಸಿದ ಸಮಗ್ರ ವಿಚಾರಗಳನ್ನು ಕುರಿತು ನುರಿತ ತಜ್ಞರಾದ ಶ್ರೀ ಎ.ಎಸ್. ರವಿ ಅವರಿಂದ ವಿಶೇಷ ಉಪನ್ಯಾಸ, ಸಂವಾದ ಹಾಗೂ ಮಾರ್ಗದರ್ಶನದ ಕಾರ್ಯಾಗಾರ ನಡೆಯಲಿದೆ.

‘ಪ್ರತಿಯೊಬ್ಬ ತಂದೆ, ತಾಯಿಯ ಕನಸು ನನ್ನ ಮಗ ಡಾಕ್ಟರ್ ಆಗಬೇಕು, ಇಂಜಿನಿಯರ್ ಆಗಬೇಕು, ಒಳ್ಳೆಯ ಉದ್ಯೋಗಕ್ಕೆ ಹೋಗಬೇಕು ಎಂಬುದಾಗಿರುತ್ತದೆ. ಹಾಗಾಗಿ ನೀಟ್ ಮತ್ತು ಸಿಇಟಿ ಬಗ್ಗೆ ಹೆಚ್ಚು ಒತ್ತು ನೀಡುತ್ತಾರೆ. ನೀಟ್ ಪರೀಕ್ಷೆ ತೆಗೆದುಕೊಳ್ಳುವುದು ಬಹುತೇಕ ಆನ್‌ಲೈನ್ ಪ್ರಕಿಯೆಯಾಗಿರುವ ಕಾರಣ, ಗ್ರಾಮೀಣ ವಿದ್ಯಾರ್ಥಿಗಳಿಗೆ ಬಹಳ ಕಷ್ಟವಾಗುತ್ತಿದೆ. ಹಾಗಾಗಿ ಇದರ ಬಗ್ಗೆ ಸಮಗ್ರ ತಿಳುವಳಿಕೆ ನೀಡುವ ಸಲುವಾಗಿ ಈ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ. ಮಕ್ಕಳು ಯಾವ ಕೋರ್ಸ್ ಆಯ್ಕೆ ಮಾಡಿಕೊಳ್ಳಬೇಕು. ಉದ್ಯೋಗದೃಷ್ಟಿಯಿಂದ ಯಾವ ಕೋರ್ಸುಗಳಿಗೆ ಬೇಡಿಕೆಯಿದೆ ಎಂಬ ಮಾಹಿತಿಯನ್ನು ನೀಡಲಾಗುತ್ತದೆ. ಈ ವರ್ಷ ಹೊಸದಾಗಿ ‘ಬ್ಯಾಚುಲರ್ ಆಫ್ ಫಿಜಿಯೋಥರಪಿ’ ಮತ್ತು ‘ಬ್ಯಾಚುಲರ್ ಆಫ್ ಅಕ್ಯುಪೇಷನ್ ಥೆರಪಿ’ ಎಂಬ ಎರಡು ಹೊಸ ವಿಷಯಗಳು ಸೇರ್ಪಡೆಗೊಂಡಿವೆ. ಹಿಂದಿನ ವೈದ್ಯಕೀಯ ಮತ್ತು ಇತರೆ ಕೋರ್ಸ್‌ಗಳು ಹಾಗೆಯೇ ಮುಂದುವರಿದಿದೆ.

‘ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನಿಂದ ಆರ್ಥಿಕವಾಗಿ ದುರ್ಬಲ ಮತ್ತು ಪ್ರತಿಭಾವಂತ ಹಿಂದುಳಿದವರ್ಗದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ವಿದ್ಯಾರ್ಥಿವೇತನ ನೀಡುತ್ತಿದೆ. ಜೊತೆಗೆ ನರ್ಸಿಂಗ್ ಮತ್ತು ಫಿಜಿಯೋಥೆರಪಿಯ ಪ್ರತಿಭಾವಂತ ವಿದ್ಯಾರ್ಥಿಗಳಿಗೂ ವಿದ್ಯಾರ್ಥಿವೇತನದ ಸೌಲಭ್ಯವಿದೆ. ನಮ್ಮ ಶ್ರೀದೇವಿ ಚಾರಿಟಬಲ್ ಟ್ರಸ್ಟ್ ಪ್ರತಿವರ್ಷ ವಿದ್ಯಾರ್ಥಿವೇತನಕ್ಕಾಗಿ ಎರಡು ಕೋಟಿ ರೂಗಳನ್ನು ವೆಚ್ಚ ಮಾಡುತ್ತದೆ” ಎಂದು ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರಾದ ಡಾ. ಎಂ.ಆರ್. ಹುಲಿನಾಯ್ಕರ್ ಅವರು ಫೆಬ್ರವರಿ 12ರಂದು ತುಮಕೂರಿನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

■ ವರದಿ: ಎನ್. ಆನಂದ

# ಸಾವಿನಲ್ಲೂ ಆದರ್ಶ ಮೆರೆದ ಮಹಿಳೆಯರು




ಫ್ಲಾರೆನ್ಸ್ ನೈಟಿಂಗೇಲ್ ಆಧುನಿಕ ನರ್ಸಿಂಗ್ ವ್ಯವಸ್ಥೆಗೆ ಮುನ್ನುಡಿ ಬರೆದವರು. ಹೀಗಾಗಿ ಅವರ ಗೌರವಾರ್ಥ ಅವರ ಜನ್ಮದಿನವಾದ ಮೇ 12ನ್ನು 'ವಿಶ್ವ ದಾದಿಯರ ದಿನ'ವೆಂದು ಅರ್ಥಪೂರ್ಣವಾಗಿ ಆಚರಿಸಲಾಗುತ್ತದೆ. ಫ್ಲಾರೆನ್ಸ್ ನೈಟಿಂಗೇಲ್ ಅವರು ಕೈಯಲ್ಲಿ ದೀಪ ಹಿಡಿದುಕೊಂಡು ರಾತ್ರಿಯಿಡೀ ಗಾಯಾಳು ಸೈನಿಕರನ್ನು ಉಪಚರಿಸುತ್ತಿದ್ದರಿಂದ ಅವರು 'ದೀಪಧಾರಿಣಿ ದೇವತೆ' ಎಂದು ಪ್ರಸಿದ್ಧರಾಗಿದ್ದಾರೆ.

ಆಗರ್ಭ ಶ್ರೀಮಂತ ಕುಟುಂಬದಲ್ಲಿ ಜನಿಸಿದ್ದರೂ ಮನುಕುಲದ ಸೇವೆಗೆ ಎಲ್ಲವನ್ನು ತ್ಯಾಗ ಮಾಡಿದ ಮಾನವತಾವಾದಿ ಫ್ಲಾರೆನ್ಸ್ ನೈಟಿಂಗೇಲ್. ಅವರನ್ನೇ ಆದರ್ಶವನ್ನಾಗಿಟ್ಟುಕೊಂಡು ದಾದಿಯರು ಈಗಲೂ ರೋಗಿಗಳ ಸೇವೆ ಮಾಡುತ್ತಿದ್ದಾರೆ. ಆರೋಗ್ಯ ಸೇವೆಯಲ್ಲಿ ಸಹೋದರಿ (ಸಿಸ್ಟರ್) ಮತ್ತು ಮಾತೆಯರ ಪಾತ್ರ ಅನನ್ಯ ಮತ್ತು ಅಮೂಲ್ಯ.

ಸಾವಿನ ಅನಂತರ ದೇಹ ಮಣ್ಣಲ್ಲಿ ಮಣ್ಣಾಗಿ ಹೋಗುತ್ತದೆ. ಆದರ್ಶ, ಮೌಲ್ಯಗಳಿಗಾಗಿ ಬದುಕಿದವರು ಮಾತ್ರ ಸಾವಿನ ತರುವಾಯವೂ ಮಾನವ ಜ್ಯೋತಿಗಳಾಗಿ ಸಮಾಜಕ್ಕೆ ಬೆಳಕು ನೀಡುತ್ತಲೇ ಇರುತ್ತಾರೆ. ಅಂತಹವರು ಲಕ್ಷಕ್ಕೆ, ಕೋಟಿಗೆ ಒಬ್ಬರು ದೊರಕಬಹುದು. ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಅರ್ಜುನನಿಗೆ 'ನೀನು ನಿನ್ನ ಕರ್ತವ್ಯಗಳನ್ನು ಮಾಡು ಫಲಾಪೇಕ್ಷೆಯನ್ನು ದೇವರಿಗೆ ಬಿಡು' ಎಂದು ಹೇಳಿದ್ದಾನೆ. ಇದನ್ನೇ ಗಾಂಧೀಜಿಯವರು ಅನಾಸಕ್ತಿಯೋಗ ಎಂದು ಹೇಳಿದ್ದಾರೆ. ಜನಸೇವೆಯೇ ಜನಾರ್ದನನ ಸೇವೆ ಎಂದು ಯಾವುದೇ ಸ್ವಾರ್ಥ, ಅಪೇಕ್ಷೆ, ನಿರೀಕ್ಷೆ ಇಲ್ಲದೇ ಮಾಡಿದ ಸೇವೆ-ಕೆಲಸಗಳು ಇತಿಹಾಸದ ಪುಟಗಳಲ್ಲಿ ಎಂದೆಂದಿಗೂ ಕಾಣಿಸಿಕೊಳ್ಳುತ್ತಿರುತ್ತವೆ. ನಿಷ್ಕಾಮ ಪ್ರೇಮವೇ ನಿಜವಾದ ಧರ್ಮ. ಸಾವಿನ ಅನಂತರವೂ ಜನರ ಮನಸ್ಸಿನಲ್ಲಿ ಅವರ ನೆನಪು ಹಸಿರಾಗಿ ಉಳಿಯಬೇಕಾದರೆ, ಮಾಡಿದ ಕೆಲಸ-ಕಾರ್ಯ, ಹಾಕಿಕೊಟ್ಟ ಆದರ್ಶ ಸರ್ವಕಾಲಕ್ಕೂ ಮಾದರಿಯಾಗಿರಬೇಕು. ಅಂತಹ ಆದರ್ಶ ಜೀವನ ನಡೆಸಿದ ಮಹಿಳೆಯರಾದ ತುಮಕೂರಿನ ಎ.ಎನ್.ಎಂ. ಸೆಂಟರ್‌ನ ನಿವೃತ್ತ ಪಾಂಶುಪಾಲರಾಗಿದ್ದ ದಿವಂಗತ ಎಸ್.ಎನ್. ಸರೋಜಮ್ಮ, ಮತ್ತು ದಿವಂಗತ ಚನ್ನಗಿರಿ ವಿಮಲಮ್ಮ ನಾರಾಯಣ ಜೋಯಿಸ್ ಅವರನ್ನು ಸ್ಮರಿಸುವ ಕಾರ್ಯ ಮತ್ತು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಆರನೆಯ ವರ್ಷದ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ ಫೆಬ್ರವರಿ 11ರಂದು ತುಮಕೂರಿನ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಅಂಗಳದಲ್ಲಿ ನಡೆಯಿತು.



**ಎಸ್. ಎನ್. ಸರೋಜಮ್ಮ ಹಾಗೂ ವಿಮಲಮ್ಮ ನಾರಾಯಣ ಜೋಯಿಸ್**

ತುಮಕೂರು ಜಿಲ್ಲೆಯ ಸಂಪ್ರದಾಯಸ್ಥ ಮನೆತನದಲ್ಲಿ ಹುಟ್ಟಿದ ಎಸ್.ಎನ್. ಸರೋಜಮ್ಮ ತುಮಕೂರಿನ ಎ.ಎನ್.ಎಂ. ಸೆಂಟರ್‌ನ ನಿವೃತ್ತ ಪ್ರಾಂಶುಪಾಲರು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ 30 ವರ್ಷ ಸಾರ್ಥಕ ಸೇವೆ ಸಲ್ಲಿಸಿದ್ದರು. ಮೆಡಿಕಲ್ ಸೈನ್ಸ್ ಓದಬೇಕಾದರೆ ದೇಹದ ಭಾಗಗಳು, ಅವುಗಳ ಕೆಲಸದ ಬಗ್ಗೆ ಗೊತ್ತಿರಬೇಕು. ಈ ಕಾರಣಕ್ಕಾಗಿ, ಅವರ ಉಪಯೋಗಕ್ಕಾಗಿಯೇ ತಮ್ಮ ದೇಹವನ್ನು ಶ್ರೀದೇವಿ ಮೆಡಿಕಲ್ ಕಾಲೇಜಿಗೆ ದಾನವಾಗಿ ನೀಡಿ ಸಾವಿನ ನಂತರವೂ ಸಾರ್ಥಕ್ಯವನ್ನು ಮೆರೆದಿದ್ದಾರೆ.

ಚನ್ನಗಿರಿ ವಿಮಲಮ್ಮ ನಾರಾಯಣ ಜೋಯಿಸ್ ನೂರಾರು ಸಂಪ್ರದಾಯದ ಹಾಡುಗಳನ್ನು ನೆನಪಿನ ಶಕ್ತಿಯಿಂದಲೇ ಕಟ್ಟಿ ಹಾಡಿದ್ದ ಅಭಿಜಾತ ಕಲಾವಿದೆ. ಸಂಸ್ಕೃತಿ ಪರಂಪರೆ ಉಳಿವಿಗೆ ಶ್ರಮಿಸಿ, ಕೊಡುಗೆ ನೀಡಿದವರು.

ಈ ಇಬ್ಬರು ಮಹಿಳೆಯರ ಹೆಸರಿನಲ್ಲಿ ಅವರ ಮಕ್ಕಳಾದ ಶ್ರೀಮತಿ ವಿಜಯಲಕ್ಷ್ಮೀ ಸುಧೀಂದ್ರ, ಶ್ರೀಮತಿ ಎನ್. ಲಲಿತಾ ರವೀಂದ್ರ ಹಾಗೂ ಶ್ರೀಮತಿ ಎನ್. ಭಾರತಿ ಕಮಲೇಶ್ ಅವರು ಪ್ರತಿ ವರ್ಷ ಪ್ರತಿಭಾವಂತ ನರ್ಸಿಂಗ್ ವಿದ್ಯಾರ್ಥಿಗಳಿಗೆ ನಗದು ಬಹುಮಾನ ನೀಡಿ ಸನ್ಮಾನಿಸಲು ಶ್ರೀದೇವಿ ಶಿಕ್ಷಣ ಸಂಸ್ಥೆಯಲ್ಲಿ ದತ್ತಿಯನ್ನು ಸ್ಥಾಪಿಸಿದ್ದಾರೆ.

ಇದೇ ಸಂದರ್ಭದಲ್ಲಿ 2025- 2026 ನೇ ಸಾಲಿನ ಶೈಕ್ಷಣಿಕ ಸಾಧನೆಗಾಗಿ ನರ್ಸಿಂಗ್ ಕಾಲೇಜಿನ ಪ್ರತಿಭಾನ್ವಿತ ವಿದ್ಯಾರ್ಥಿಗಳಾದ ಸಿ. ಭೂಮಿಕಾ, ಐಶ್ವರ್ಯ ಶ್ರೀಕುಮಾರ್, ಪಿ.ಜಿ. ಅಮೃತ, ಎಂ.ಆರ್. ಶ್ರಾವಣಿ, ಅಲನ್‌ಪಾಲ್ ಆಂಟನಿ - ಅವರುಗಳಿಗೆ ಸರೋಜಮ್ಮ-ವಿಮಲಮ್ಮ ದತ್ತಿಪ್ರಶಸ್ತಿ ನೀಡಿ ಗೌರವಿಸಲಾಯಿತು. ಸಮಾರಂಭಕ್ಕೆ ಆಗಮಿಸಿದ್ದ ದತ್ತಿ ಪ್ರಶಸ್ತಿ ಸ್ಥಾಪಕರಲ್ಲಿ ಒಬ್ಬರಾದ ಶ್ರೀಮತಿ ಎನ್. ಲಲಿತಾ ರವೀಂದ್ರ ದಂಪತಿಗಳನ್ನು ಸಭಿಕರ ಸಮ್ಮುಖದಲ್ಲಿ ಸನ್ಮಾನಿಸಲಾಯಿತು.

ಪ್ರಾರಂಭದಲ್ಲಿ ಶ್ರೀದೇವಿ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಆರ್.ಕೆ. ಮುನಿಸ್ವಾಮಿ ಅವರು ಸ್ವಾಗತಿಸಿದರು. ಕೊನೆಯಲ್ಲಿ ರಮಣಮಹರ್ಷಿ ನರ್ಸಿಂಗ್ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಸ್. ಉಷಾ ಅವರು ವಂದನಾರ್ಪಣೆಯನ್ನು ಸಲ್ಲಿಸಿದರು.

■ ವರದಿ: ಕೆ. ಎಸ್. ರಾಜಮನ್ನಾರ್

## ಆ ದತ್ತಿ ಪ್ರಶಸ್ತಿ ಸಮಾರಂಭದಲ್ಲಿ ಮಾತನಾಡಿದ ಗಣ್ಯರು, ಶುಶ್ರೂಷಕ ಮತ್ತು ವೈದ್ಯರ ಹುದ್ದೆ ಬಗ್ಗೆ ಹೇಳಿರುವ ಮಾತುಗಳು

**"ವೈದ್ಯರು ಮತ್ತು ಶುಶ್ರೂಷಕರು ಪರಮಾತ್ಮನ ಪ್ರತಿನಿಧಿಗಳು. ನಿಸ್ವಾರ್ಥ ಸೇವೆಗಿಂತ ಉತ್ತಮ ಮಾರ್ಗ ಬೇರೊಂದಿಲ್ಲ. ಅದೇ ರೀತಿ ಜ್ಞಾನಕಿಂತ ಮಿಗಿಲಾದದ್ದು ಪ್ರಪಂಚದಲ್ಲಿ ಯಾವುದೂ ಇಲ್ಲ. ಶುಶ್ರೂಷಕರು ಮತ್ತು ವೈದ್ಯರ ವೃತ್ತಿ ಅತ್ಯಂತ ಪವಿತ್ರವಾದ ವೃತ್ತಿಯಾಗಿದೆ. ಶುಶ್ರೂಷಕ ಹುದ್ದೆಯಲ್ಲಿರುವವರು ಪ್ರತಿಯೊಬ್ಬರು ತಾವು ಮದರ್ ಥೆರೆಸಾ, ಫ್ಲಾರೆನ್ಸ್ ನೈಟಿಂಗೇಲ್ ಎಂದುಕೊಳ್ಳಬೇಕು."**

**ಡಾ. ಎಂ.ವಿ. ನಾಗರಾಜರಾವ್**
**ಅನುವಾದಕರು ಹಾಗೂ ಕಾದಂಬರಿಕಾರ**

**"ಶುಶ್ರೂಷಕ ಹುದ್ದೆಗೆ ಜಗತ್ತಿನಾದ್ಯಂತ ಬೇಡಿಕೆಯಿದೆ. ವೈದ್ಯರು ಮತ್ತು ಶುಶ್ರೂಷಕರಿಗೆ ಪ್ರೀತಿಸುವುದು ಗೊತ್ತೇ ಹೊರತು ದ್ರೋಹ, ವಂಚನೆ ಗೊತ್ತಿರುವುದಿಲ್ಲ. ಸಾವಿನ ಅನಂತರವೂ ಬದುಕನ್ನು ಸಾರ್ಥಕ ಪಡಿಸಿಕೊಂಡಿರುವ ಮಾತೃಶ್ರೀಗಳಾದ ದಿವಂಗತ ಸರೋಜಮ್ಮ ಮತ್ತು ವಿಮಲಮ್ಮ ಅವರು ಸಮಾಜಕ್ಕೆ ಆದರ್ಶವಾಗಿದ್ದಾರೆ. ಎಷ್ಟು ಜನರಿಗೆ ಇಂತಹ ಆದರ್ಶವನ್ನು ಪಾಲಿಸುತ್ತಾರೆ ಮತ್ತು. ಎಷ್ಟು ಜನರು ಮತ್ತು ಎಷ್ಟು ಕುಟುಂಬಗಳು ಇಷ್ಟು ಉದಾತ್ತವಾಗಿ ಆಲೋಚಿಸುತ್ತಾರೆ?"**

**ಡಾ. ಆರ್. ಭಾಗ್ಯಲಕ್ಷ್ಮಿ, ಪ್ರಾಂಶುಪಾಲರು**
**ಶ್ರೀಲಕ್ಷ್ಮಿ ನರ್ಸಿಂಗ್ ಕಾಲೇಜು ಬೆಂಗಳೂರು**

**"ಭಾರತೀಯ ಶುಶ್ರೂಷಕರಿಗೆ ಜಗತ್ತಿನಾದ್ಯಂತ ಬಹಳ ಬೇಡಿಕೆಯಿದೆ. ಅದೇ ರೀತಿ ಉದ್ಯೋಗಾವಕಾಶವು ಹೇರಳವಾಗಿದೆ. ರೋಗಿಗೆ ಮಾತ್ರೆ, ಇಂಜಕ್ಷನ್‌ಗಳಿಗಿಂತ ವೈದ್ಯರು ಮತ್ತು ಶುಶ್ರೂಷಕರ ತೋರಿಸುವ ಅನುಕಂಪ, ಕರುಣೆ ಹಾಗೂ ಪ್ರೀತಿಯ ಮಾತುಗಳೇ ಅವರಲ್ಲಿ ಆತ್ಮವಿಶ್ವಾಸ ಹೆಚ್ಚಿಸಿ ರೋಗವು ಬೇಗ ಗುಣವಾಗುವಂತೆ ಮಾಡುತ್ತವೆ ಮತ್ತು ನಾವು ಕೊಡುವ ಔಷಧಗಳಿಗಿಂತ ಇವು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ."**

**ಡಾ. ಎಂ. ಆರ್. ಹುಲಿನಾಯ್ಕರ್**
**ಶ್ರೀದೇವಿ ಸಮೂಹ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷರು**



## ಭಕ್ತರ ದುಃಖ, ದಾರಿದ್ರ್ಯ ನಿವಾರಿಸುತ್ತಿರುವ ತಾಯಿ ದುರ್ಗಾಂಬಿಕಾದೇವಿ

"ಮಾತೃಶ್ರೀ ಶಾಂತಾದುರ್ಗಾದೇವಿ ಹುಲಿನಾಯ್ಕರ್ ಅವರ ವಿಶೇಷ ಪ್ರಯತ್ನದ ಜೊತೆಗೆ ಡಾ. ಎಂ. ಆರ್ ಹುಲಿನಾಯ್ಕರ್ ಅವರ ಕುಟುಂಬದ ಇಚ್ಛೆ, ಒತ್ತಾಸೆ ಮೇರೆಗೆ ಶ್ರೀದುರ್ಗಾಂಬಿಕಾದೇವಿ ಈ ಆವರಣದಲ್ಲಿ ನೆಲೆಸಿದ್ದಾಳೆ. 'ಕಷ್ಟ ಪರಿಹರಿಸು' ಎಂದು ಬೇಡಿಕೊಂಡ ಭಕ್ತರ ಕೋರಿಕೆಗಳನ್ನು ಪೂರೈಸುತ್ತಿದ್ದಾಳೆ. ಇಲ್ಲಿ ಬರುವ ಭಕ್ತರು ಬೇಡಿಕೊಂಡಿದ್ದುದೆಲ್ಲವನ್ನೂ ಈ ತಾಯಿ ಕರುಣಿಸಿದ್ದಾಳೆ" ಎಂದು ಶ್ರೀ ದುರ್ಗಾಂಬಿಕಾ ದೇವಾಲಯದ ಪ್ರಧಾನ ಅರ್ಚಕ ಚಂದ್ರಶೇಖರ್ ಅವರು ತಮಗಾದ ಅನುಭವವನ್ನು ತಿಳಿಸಿದರು.

ಕಲಿಯುಗದಲ್ಲಿ ಗಣಪತಿ ಮತ್ತು ಅಮ್ಮನವರನ್ನು ಸಂತುಷ್ಟಗೊಳಿಸಿದರೆ ಎಲ್ಲಾ ದೇವತೆಗಳು ಸಂತೃಪ್ತರಾಗುತ್ತಾರೆ. ಅಂತಹ ಭಕ್ತ ಜೀವನದಲ್ಲಿ ಸುಖ, ಶಾಂತಿ, ನೆಮ್ಮದಿಗಳು ನೆಲಸಿ, ಅವರ ಸಕಲ ಇಷ್ಟಾರ್ಥಗಳೂ ನೆರವೇರಲಿವೆ. ಹೀಗಾಗಿ ಇಲ್ಲಿ ಪ್ರತಿದಿನವೂ ವಿಶೇಷ ಪೂಜೆ ನಡೆಯುತ್ತದೆ. ಎಲ್ಲ ಹಬ್ಬ-ಹರಿದಿನಗಳಲ್ಲಿ ವಿಶೇಷ ಪೂಜೆಯನ್ನು ಮಾಡಲಾಗುತ್ತಿದೆ.

ಈ ದೇವಾಲಯದಲ್ಲಿ ಒಬ್ಬ ವ್ಯಕ್ತಿ, ಒಂದು ಕುಟುಂಬ, ಆಸ್ಪತ್ರೆ, ಕಾಲೇಜಿನ ಒಳಿತಿಗಾಗಿ ಅಥವಾ ಇಲ್ಲಿ ಕೆಲಸ ಮಾಡುವವರ ಶ್ರೇಯಸ್ಸಿಗಾಗಿ ಮಾತ್ರ ಪೂಜೆಯನ್ನು ಮಾಡುವುದಿಲ್ಲ. ಬದಲಿಗೆ ಸರ್ವೇಜನಾಃ ಸುಖಿನೋ ಭವಂತು ಎಂದು ಬೇಡಿಕೊಳ್ಳುತ್ತಾ, ಸರ್ವರ ಹಿತ ಮತ್ತು ಲೋಕಕಲ್ಯಾಣಕ್ಕಾಗಿ ಪೂಜೆ-ಪ್ರಾರ್ಥನೆಗಳು ನೆರವೇರಿಸಲಾಗತ್ತವೆ.

ಶ್ರೀದುರ್ಗಾಂಬಿಕಾದೇವಿಯ ದೇವಸ್ಥಾನದ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ನಾಗದೇವತೆಗಳಿಗೆ ಆಶ್ಲೇಷಾ ಬಲಿ, ವಾಸ್ತುಹೋಮ, ಚಂಡಿಕಾಹೋಮ, ಕಳಾಶಾಭಿಷೇಕ ಹಾಗೂ ಕಲಾಹೋಮವನ್ನು ಮಾಡಲಾಯಿತು. ಅನಂತರ ಭಕ್ತರಿಗೆ ಪ್ರಸಾದವನ್ನು ವಿತರಿಸಲಾಯಿತು. ಶ್ರೀದುರ್ಗಾಂಬಿಕೆದೇವಿಯ ಆವರಣದಲ್ಲಿರುವ ಶ್ರೀಶಂಭುಲಿಂಗೇಶ್ವರನ ಪ್ರಾಣಲಿಂಗವನ್ನು ನರ್ಮದಾ ನದಿಯಿಂದ ಇಲ್ಲಿಗೆ ತಂದು ಪ್ರತಿಷ್ಠಾಪಿಸಿರುವುದು ಒಂದು ವಿಶೇಷ.

ಉಡುಪಿಯ ಜನಾರ್ಧನಭಟ್ ಅವರ ನೇತೃತ್ವದಲ್ಲಿ ವಾರ್ಷಿಕೋತ್ಸವದ ಪೂಜಾಕೈಂಕರ್ಯಗಳು ಫೆಬ್ರವರಿ 21 ಮತ್ತು 22 ರಂದು ವಿಜೃಂಭಣೆಯಿಂದ ನೆರವೇರಿಸಲಾಯಿತು ಎಂದು ದೇವಾಲಯದ ಪ್ರಧಾನ ಅರ್ಚಕ ಚಂದ್ರಶೇಖರ್ ಅವರು ತಿಳಿಸಿದರು.

Printed and Published by **Shridevi Media Center,** Lingapura, NH 4, Sira Road, Tumakuru - 572106, Mob: 94480 82844 and Printed at **Maruthi Printing Press,** No.90/6-1. 1st cross, Vittal Nagar West, Near Marvel Apartment, Bengaluru-560026. Editor: **Dr M R Hulinaykar**